ಕನ್ನಡಪ್ರಭ
ಮಂಗಳವಾರ 5.05.2026

ಹೆಚ್ಚಿನ ಸುದ್ದಿಗಳು ಪುಟ 13ರಲ್ಲಿ

ಗರಿಷ್ಠ 33°c | ಕನಿಷ್ಠ 22°c

ಸುದ್ದಿ ಸಿಂಚನ

ರಸ್ತೆ ಅಭಿವೃದ್ಧಿಗೆ ಭೂಮಿಪೂಜೆ

ಬೇಲೂರು: ಇಲ್ಲಿನ ರಂಗನಾಥಸ್ವಾಮಿ ದೇಗುಲಕ್ಕೆ ಪ್ರಭಾವಳಿ ಮಾಡಿಸಲು ಹಣ ಹಾಗೂ ರಸ್ತೆ ಅಭಿವೃದ್ಧಿಗೆ ಭೂಮಿಪೂಜೆ ನೆರವೇರಿಸುವ ಮೂಲಕ ಚುನಾವಣೆ ಸಂದರ್ಭದಲ್ಲಿ ಕೊಟ್ಟ ಮಾತನ್ನು ಉಳಿಸಿಕೊಂಡ ತೃಪ್ತಿ ತಮಗಿದೆ ಎಂದು ಶಾಸಕ ಎಚ್.ಕೆ. ಸುರೇಶ್ ಹೇಳಿದರು. ತಾಲೂಕಿನ ತಿರುಮನಹಳ್ಳಿ ಹಾಗೂ ಗಿರಿಕಲ್ಲಳ್ಳಿ ಗ್ರಾಮದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಚುನಾವಣೆ ಸಂದರ್ಭ ಗ್ರಾಮಕ್ಕೆ ಬಂದಾಗ ಗ್ರಾಮಸ್ಥರು ಹಾಗೂ ಅರ್ಚಕರು ಶ್ರೀ ರಂಗನಾಥಸ್ವಾಮಿ ದೇವಸ್ಥಾನಕ್ಕೆ ಬೆಳ್ಳಿಯ ಪ್ರಭಾವಳಿ ಬೇಕು ಅದನ್ನು ನೀವೇ ಮಾಡಿಸಿ ಕೊಡಬೇಕು ಎಂದು ಹೇಳಿದ್ದರು. ಜತೆಗೆ ಈ ಗ್ರಾಮಕ್ಕೆ ಕಳೆದ 40 ವರ್ಷಗಳಿಂದ ಓಡಾಡಲು ಸರಿಯಾದ ರಸ್ತೆ ಇಲ್ಲ. ಇದರಿಂದ ಈ ಭಾಗದ ಗ್ರಾಮಸ್ಥರು ವಾಹನಗಳಿರಲಿ ನಡೆದುಕೊಂಡು ಓಡಾಡಲು ಸಹ ಪರದಾಡುವಂತಾಗಿತ್ತು. ಇದನ್ನೂ ಸಹ ಗ್ರಾಮಸ್ಥರು ಬೇಡಿಕೆ ಇಟ್ಟಿದ್ದು ಚುನಾವಣೆಯ ನಂತರ ಬಗೆಹರಿಸುವುದಾಗಿ ಮಾತು ಕೊಟ್ಟಿದ್ದೆ ಎಂದರು. ನಾನೊಬ್ಬ ಶ್ರೀ ರಂಗಸ್ವಾಮಿ ಭಕ್ತನಾಗಿ ದೇವರಿಗೆ ಪ್ರಭಾವಳಿ ಮಾಡಿಸಲು 2 ಲಕ್ಷ ರು. ಕೊಡುತಿದ್ದೇನೆ. ಜತೆಗೆ ಕೊಟ್ಟ ಮಾತಿನಂತೆ ತಿರುಮನಹಳ್ಳಿ ಗ್ರಾಮದ ರಸ್ತೆ ಅಭಿವೃದ್ಧಿಗೆ ಲೋಕೋಪಯೋಗಿ ಇಲಾಖೆಯ 27 ಲಕ್ಷ ರು. ಅನುದಾನದಲ್ಲಿ ಗ್ರಾಮಸ್ಥರ ಸಹಕಾರದೊಂದಿಗೆ ಉತ್ತಮ ಗುಣಮಟ್ಟದಲ್ಲಿ ಕೆಲಸ ಮಾಡಿಸಲು ಮುಂದಾಗಿದ್ದೇನೆ. ಇದರೊಂದಿಗೆ ಸಮೀಪದ ಗಿರಿ ಕಲ್ಲಳ್ಳಿ ಗ್ರಾಮಕ್ಕೂ ಸರಿಯಾದ ರಸ್ತೆ ಇಲ್ಲದ ಕಾರಣ ಅಲ್ಲಿನ ಗ್ರಾಮಸ್ಥರ ಬೇಡಿಕೆಯಂತೆ ಅಲ್ಲಿಗೂ 25 ಲಕ್ಷ ರು, ಅನುದಾನದಲ್ಲಿ ಕೆಲಸ ಮಾಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು. ಗ್ರಾಮಸ್ಥರಾದ ಶಿವೇಗೌಡ, ರಾಮಚಂದ್ರು, ಕೃಷ್ಣಮೂರ್ತಿ, ಶಿವಸ್ವಾಮಿ, ಗುರುಮೂರ್ತಿ, ಮಧುಕುಮಾರ್, ಸಾವಿತ್ರಮ್ಮ, ಲಕ್ಷ್ಮಮ್ಮ, ವಾಸುದೇವ್ ಸೇರಿದಂತೆ ಇತರರಿದ್ದರು.

ಸಂಸ್ಕಾರ, ಸನ್ನಡತೆಯೊಂದಿಗೆ ಗೌರವದ ಬದುಕು ಸಾಗಿಸಿ: ಎಚ್ ವಿ ಹರೀಶ್ ಸಲಹೆ



ಹಾಸನ: ಉತ್ತಮ ಧಾರ್ಮಿಕ ಸಂಸ್ಕಾರ ಮತ್ತು ಸನ್ನಡತೆಯೊಂದಿಗೆ ಯುವ ಜನಾಂಗ ಬದುಕನ್ನು ರೂಪಿಸಿಕೊಂಡು ಗೌರವದ ಬದುಕನ್ನ ಸಾಗಿಸಬೇಕೆಂದು ಹಾಸನ ಜಿಲ್ಲಾ ವಿಶ್ವಕರ್ಮ ಸಮಾಜದ ಅಧ್ಯಕ್ಷ ಎಚ್. ವಿ. ಹರೀಶ್ ಕರೆ ನೀಡಿದರು. ನಗರದ ಶ್ರೀ ಕ್ಷೇತ್ರ ಕಾಳಿಕಾಂಬೆ ಕಮಠೇಶ್ವರ ದೇವಾಲಯದ ವಿಶ್ವಕರ್ಮ ಸಭಾಂಗಣದಲ್ಲಿ ಜರುಗಿದ ಪ್ರಥಮ ವಿಶ್ವಕರ್ಮ ವಧುವರರ ಸಮಾವೇಶವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿ, ವಿಶ್ವಕರ್ಮ ಜನಾಂಗಕ್ಕೆ ಅನುವಂಶೀಯವಾಗಿ ಬಂದಿರುವ ಕೌಶಲ್ಯವನ್ನು ವೃತ್ತಿಯಾಗಿಸಿಕೊಂಡು ಸರ್ವ ಜನಾಂಗದ ಬೆನ್ನೆಲುಬಾಗಿ ಕೀರ್ತಿವಂತರಾಗಬೇಕು. ದೇಶದ ಪರಂಪರೆ ಸಂಸ್ಕೃತಿಯ ವಾರಸುದಾರರಾಗಬೇಕು ಎಂದು ಸಲಹೆ ನೀಡಿದರು. ಸಮಾರಂಭದಲ್ಲಿ ಪುರೋಹಿತ್ ಎನ್. ಪ್ರವೀಣ್ ಕುಮಾರ್, ಬ್ರಹ್ಮಾನಂದ ಮತ್ತು ನಾಗರಾಜು ರವರುಗಳನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ವಿಶ್ವಕರ್ಮ ಸಮಾಜದ ಉಪಾಧ್ಯಕ್ಷ ಎ. ಸಿ. ನಾರಾಯಣ್ ಇತರರಿದ್ದರು.

ಜಲಾಶಯದ ಮಟ್ಟ

ಹೇಮಾವತಿ 04-05-2026

ಗರಿಷ್ಠ ಮಟ್ಟ	2922 (ಅಡಿಗಳು)
ಇಂದಿನ ಮಟ್ಟ	2895 ಅಡಿಗಳು
ಒಳಹರಿವು	34 ಕ್ಯುಸೆಕ್
ಹೊರ ಹರಿವು	480 ಕ್ಯುಸೆಕ್



ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಎಚ್ ಎಚ್ ಸತೀಶ್ ನೇಮಕ

ಚನ್ನರಾಯಪಟ್ಟಣ: ಪಟ್ಟಣದ ನೂತನ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಅಧಿಕಾರವಹಿಸಿಕೊಂಡ ಎಚ್. ಎಚ್. ಸತೀಶ್ ಅವರಿಗೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಅಭಿನಂದಿಸಲಾಯಿತು. ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹಡೇನಹಳ್ಳಿ ಲೋಕೇಶ್ ಮಾತನಾಡಿ ನೂತನ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೂ ಚನ್ನರಾಯಪಟ್ಟಣಕ್ಕೂ ಅವಿನಾಭಾವಸಂಬಂಧವಿದ್ದು ಈ ಹಿಂದೆ ಶಿಕ್ಷಕರಾಗಿ ತಾಲೂಕಿನಲ್ಲಿ ಕೆಲಸ ಮಾಡಿರುವ ಅನುಭವ ಅವರಿಗೆ ಇದೆ. ಈ ನಿಟ್ಟಿನಲ್ಲಿ ಅವರು ನಮ್ಮ ತಾಲೂಕಿನ ಶಿಕ್ಷಣಾಧಿಕಾರಿಯಾಗಿ ಆಗಮಿಸಿರುವುದು ಸಂತಸದ ವಿಷಯವಾಗಿದೆ ಎಂದರು.
ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಪದಾಧಿಕಾರಿಗಳಾದ ದಿಂಡಗೂರು ಗೋವಿಂದರಾಜು, ಜಬಿ ಉಲ್ಲಾಬೇಗ್, ಯಶೋಧ ಜೈನ್, ನಂದನ್ ಪುಟ್ಟಣ್ಣ, ಮಂಜಪ್ಪ ಮತ್ತಿತರಿದ್ದರು.



ಬೇಲೂರು ತಾಲೂಕಿನ ತಿರುಮನಹಳ್ಳಿ ಹಾಗೂ ಗಿರಿಕಲ್ಲಳ್ಳಿ ಗ್ರಾಮದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಯಿತು. ಗ್ರಾಮಸ್ಥರಾದ ಶಿವೇಗೌಡ, ರಾಮಚಂದ್ರು, ಕೃಷ್ಣಮೂರ್ತಿ, ಶಿವಸ್ವಾಮಿ, ಗುರುಮೂರ್ತಿ, ಮಧುಕುಮಾರ್, ಸಾವಿತ್ರಮ್ಮ, ಲಕ್ಷ್ಮಮ್ಮ, ವಾಸುದೇವ್ ಇತರರಿದ್ದರು.



ಬಾಗೂರು ಹೋಬಳಿಯ ಭಕ್ತರಹಳ್ಳಿಯಲ್ಲಿ ಗ್ರಾಮದ ಪರಿಮಿತಿಯಲ್ಲಿ ಕಾಂಕ್ರೀಟ್ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಎನ್. ಬಾಲಕೃಷ್ಣ ಭೂಮಿಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಉದ್ಯಮಿ ಅಣತಿ ಯೋಗೇಶ್, ಗುತ್ತಿಗೆದಾರ ಬಾಗೂರು ಮನು, ಮುಖಂಡರಾದ ಪುಟ್ಟರಾಜಣ್ಣ ಇತರರಿದ್ದರು.

ಎತ್ತಿನಹೊಳೆ ಯೋಜನೆ ಕಾಮಗಾರಿಗೆ ಮರುಜೀವ

ಅರಣ್ಯ ಇಲಾಖೆ ಅನುಮತಿ ಬಳಿಕ ಕಾಮಗಾರಿಗೆ ವೇಗ | ಕಾರ್ಯಗಳಿಗೆ ಮರು ಭೂಮಿಪೂಜೆ ನೆರವೇರಿಸಿದ ಶಾಸಕ ಶಿವಲಿಂಗೇಗೌಡ

• **ಕನ್ನಡಪ್ರಭ ವಾರ್ತೆ** ಅರಸೀಕೆರೆ

ಹಲವು ವರ್ಷಗಳಿಂದ ತಾಂತ್ರಿಕ ಹಾಗೂ ಕಾನೂನು ಅಡೆತಡೆಗಳಿಂದ ಸ್ಥಗಿತಗೊಂಡಿದ್ದ ಎತ್ತಿನಹೊಳೆ ಯೋಜ ನೆಗೆ ಇದೀಗ ಮಹತ್ವದ ತಿರುವು ಸಿಕ್ಕಿದ್ದು, ಕೇಂದ್ರ ಅರಣ್ಯ ಇಲಾಖೆಯ ಅನುಮತಿ ಲಭಿಸಿದ ಹಿನ್ನೆಲೆಯಲ್ಲಿಕಾಮಗಾರಿಗಳುಪುನಾರಂಭಗೊಂಡಿವೆ. ಈ ಬೆಳವಣಿಗೆ ಬಯಲು ಸೀಮೆ ಅರಸೀಕೆರೆ ತಾಲೂಕು ಸೇರಿದಂತೆ ಮಧ್ಯ ಕರ್ನಾಟಕದ ಹತ್ತಾರು ಜಿಲ್ಲೆಗಳ ಜನತೆಗೆ ಕುಡಿಯುವ ನೀರಿನ ಭರವಸೆ ಮೂಡಿಸಿದೆ.

ಅನುಮತಿ ಸಿಗುತ್ತಿದ್ದಂತೆಯೇ ಶಾಸಕ ಕೆ.ಎಂ. ಶಿವಲಿಂಗೇಗೌಡರು ಚುರುಕಾಗಿ ಕಾರ್ಯನಿರ್ವಹಿಸಿ, ತಾಲೂಕಿನ ನಾಗೇನಹಳ್ಳಿ ಸಮೀಪದ ರಂಗನಾಥಸ್ವಾಮಿ ದೇವಾಲಯದ ಬಳಿಯಲ್ಲಿ ಸ್ಥಗಿತಗೊಂಡಿದ್ದ ಕಾಮಗಾರಿಗೆ ಮರು ಭೂಮಿಪೂಜೆ ನೆರವೇರಿಸಿ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮಧ್ಯ ಕರ್ನಾಟಕದ ಬರಪೀಡಿತ ಪ್ರದೇಶಗಳಿಗೆ ಜೀವನಾಡಿಯಾಗಿರುವ ಎತ್ತಿನಹೊಳೆ ಯೋಜನೆ ಅನೇಕ ಅಡೆತಡೆಗಳು, ಕಾನೂನು ತೊಡಕುಗಳು ಮತ್ತು ಆಡಳಿತಾತ್ಮಕ ಸವಾಲುಗಳನ್ನು ಮೀರಿ ಇಂದು ಮಹತ್ವದ ಹಂತಕ್ಕೆ ತಲುಪಿದೆ. ಈ ಯೋಜನೆ ಕೇವಲ ನೀರು ತರಿಸುವ ಕಾಮಗಾರಿಯಲ್ಲ, ಇದು ಬಯಲು ಸೀಮೆಯ ಜನರ ಬದುಕಿಗೆ ಹೊಸ ದಿಕ್ಕು ತೋರಿಸುವ ಮಹತ್ತರ ಪ್ರಯತ್ನವಾಗಿದೆ. ವರ್ಷಗಳ ಕಾಲ ಕುಡಿಯುವ ನೀರಿಗೂ ಸಂಕಷ್ಟ ಅನುಭವಿಸಿದ್ದ ತಾಲೂಕಿನ ಜನತೆಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ನಾವು ಹೋರಾಟ ನಡೆಸಿದ್ದೇವೆ. ಸರ್ಕಾರದ ವಿವಿಧ ಹಂತಗಳಲ್ಲಿ ನಿರಂತರವಾಗಿ ಮನವಿ ಮಾಡಿದ್ದು, ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿದ್ದು, ನಮ್ಮ ಎಲ್ಲಾ ಹೋರಾಟದ ಫಲವಾಗಿ ಇಂದು ಈ ಹಂತಕ್ಕೆ ಕಾಮಗಾರಿ ಬಂದು ನಿಂತಿದೆ. ಇನ್ನು ಕೆಲವೇ ದಿನಗಳಲ್ಲಿ ತಾಲೂಕಿನ ಕೆರೆ-ಕಟ್ಟೆಗಳಲ್ಲಿ ನೇತ್ರಾವತಿ ಕೊಳ್ಳದ ನೀರು ಹರಿದು ಬರಲಿದ್ದು, ರೈತರ ಕೃಷಿಗೆ ಹೊಸ ಜೀವ ತುಂಬಲಿದೆ. ಇದರಿಂದ ಕುಡಿಯುವ ನೀರಿನ ಸಮಸ್ಯೆ ಮಾತ್ರವಲ್ಲದೆ, ಕೃಷಿ ಚಟುವಟಿಕೆಗಳು ವಿಸ್ತಾರವಾಗಿ, ಆರ್ಥಿಕ ಅಭಿವೃದ್ಧಿಗೂ ನೆರವಾಗಲಿದೆ. ಮುಂದಿನ ಪೀಳಿಗೆಗೂ ನೀರಿನ ಕೊರತೆ ಉಂಟಾಗದಂತೆ ಶಾಶ್ವತ ವ್ಯವಸ್ಥೆ ನಿರ್ಮಾಣ ಮಾಡುವುದು ನಮ್ಮ ಮುಖ್ಯ ಗುರಿಯಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.



ಅರಸೀಕೆರೆ ತಾಲೂಕಿನ ನಾಗೇನಹಳ್ಳಿ ಸಮೀಪ ಸ್ಥಗಿತಗೊಂಡಿದ್ದ ಕಾಮಗಾರಿಗೆ ಮರು ಭೂಮಿಪೂಜೆ ನೆರವೇರಿಸಿ ಚಾಲನೆ ನೀಡಲಾಯಿತು. ಶಾಸಕ ಕೆ.ಎಂ. ಶಿವಲಿಂಗೇಗೌಡ, ಕೋಡಿ ಮಠದ ಶ್ರೀಗಳು ಭಾಗಿಯಾಗಿದ್ದರು.

ಎತ್ತಿನಹೊಳೆ ವರದಾನ: ಕೋಡಿಶ್ರೀ: ಹಾರನಹಳ್ಳಿ ಕೋಡಿಮಠದ ಡಾ. ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಮಾತನಾಡಿ, ಬರಪೀಡಿತ ಅರಸೀಕೆರೆ ತಾಲೂಕಿಗೆ ಎತ್ತಿನಹೊಳೆ ಯೋಜನೆ ನಿಜಕ್ಕೂ ವರದಾನವಾಗಿದ್ದು, ಇದು ಶಾಸಕ ಶಿವಲಿಂಗೇಗೌಡರ ಅವಿರತ ಹೋರಾಟದ ಪ್ರತಿಫಲವಾಗಿದೆ. ಒಂದು ಕಾಲದಲ್ಲಿ ಕುಡಿಯುವ ನೀರಿಗೂ ಹಾಹಾಕಾರ ಪಡುವಂತಿದ್ದ ಈ ಭಾಗದ ಜನರ ಸಂಕಷ್ಟವನ್ನು ಅವರು ಹೃದಯಂಗಮವಾಗಿ ಅರಿತು, ನಿರಂತರವಾಗಿ ಸರ್ಕಾರದ ಮಟ್ಟದಲ್ಲಿ ಹೋರಾಟ ನಡೆಸಿದ ಪರಿಣಾಮ ಇಂದು ಯೋಜನೆ ಸಾಕಾರವಾಗುವ ಹಂತಕ್ಕೆ ಬಂದಿದೆ.

ಶಾಸಕ ಶಿವಲಿಂಗೇಗೌಡರು ಕೇವಲ ರಾಜಕೀಯ ನಾಯಕನಾಗಿ ಮಾತ್ರವಲ್ಲ, ಜನಸೇವಕನಾಗಿ ಕೆಲಸ ಮಾಡಿ, ತಾಲೂಕಿನ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ನೀರಾವರಿ ವ್ಯವಸ್ಥೆ ರೂಪಿಸುವ ದಿಟ್ಟ ಸಂಕಲ್ಪ ತೋರಿದ್ದಾರೆ. ಮುಂದಿನ ಕೆಲವು ವರ್ಷಗಳಲ್ಲಿ ಅರಸೀಕೆರೆ ತಾಲೂಕು ಸಂಪೂರ್ಣವಾಗಿ ನೀರಾವರಿ ಸೌಲಭ್ಯ ಹೊಂದಿದ ಪ್ರದೇಶವಾಗಿ ರೂಪಾಂತರಗೊಳ್ಳಲಿದೆ. ಈ ಯೋಜನೆ ಯಶಸ್ವಿಯಾದರೆ ರೈತರ ಬದುಕಿನಲ್ಲಿ ಮಹತ್ತರ ಬದಲಾವಣೆ ತರಲಿದೆ ಮಾತ್ರವಲ್ಲ, ಬರಪೀಡಿತ ಪ್ರದೇಶವನ್ನು ಸಮೃದ್ಧ ನಾಡಾಗಿ ಪರಿವರ್ತಿಸುವ ಶಕ್ತಿಯನ್ನೂ ಹೊಂದಿದೆ ಎಂದರು.

ಇಂತಹ ಮಹತ್ವಾಕಾಂಕ್ಷಿ ಯೋಜನೆಗಾಗಿ ಅವರು ತೋರಿದ ಪರಿಶ್ರಮ, ತ್ಯಾಗ ಮತ್ತು ನಿರಂತರ ಪ್ರಯತ್ನಗಳು ಇತಿಹಾಸದಲ್ಲಿ ದಾಖಲೆಯಾಗಲಿವೆ. ಶಿವಲಿಂಗೇಗೌಡರ ಈ ಹೋರಾಟವೇ ಅರಸೀಕೆರೆ ತಾಲೂಕಿನ ಅಭಿವೃದ್ಧಿಗೆ ದಿಕ್ಕು ತೋರಿಸುವ ದೀಪವಾಗಿ ಉಳಿಯಲಿದೆ ಎಂದು ಸ್ವಾಮೀಜಿ ಪ್ರಶಂಸಿಸಿದರು.

ಶಾಶ್ವತ ಪರಿಹಾರ: ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಧರ್ಮಶೇಖರ್ ಮಾತನಾಡಿ ಎರಡು ನದಿಗಳು ಹರಿದರೂ ನೀರಾವರಿ ಸೌಲಭ್ಯವಿಲ್ಲದೆ ಸಂಕಷ್ಟದಲ್ಲಿದ್ದ ತಾಲೂಕಿನ ಜನತೆಗೆ ಈ ಯೋಜನೆ ಶಾಶ್ವತ ಪರಿಹಾರ ನೀಡಲಿದೆ. ಮುಂದಿನ ಹಲವು ದಶಕಗಳವರೆಗೆ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಕ್ರಮ ಕೈಗೊಳ್ಳಲಾಗಿದೆ. ಶಿವಲಿಂಗೇಗೌಡರ ಪ್ರಯತ್ನಗಳಿಂದ ಬರ ಪ್ರದೇಶಕ್ಕೆ ನೀರು ಹರಿಯುವಂತಾಗಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಕೆಪಿಸಿಸಿ ಜಿಲ್ಲಾ ಕಾರ್ಯಾಧ್ಯಕ್ಷ ಜಿ.ಬಿ. ಶಶಿಧರ್, ಕಾಂಗ್ರೆಸ್ ಮುಖಂಡರಾದ ಅಡವಿಸ್ವಾಮಿ, ಶಿವಶಂಕರ್, ಜಿಪಂ ಮಾಜಿ ಉಪಾಧ್ಯಕ್ಷ ಬಿಳಿಚೌಡಯ್ಯ, ಮಾಜಿ ಸದಸ್ಯ ಸ್ವಾಮಿ, ಎತ್ತಿನಹೊಳೆ ಯೋಜನೆಯ ಎಇಇ ಆನಂದ್ ಇದ್ದರು.

ಕಾನೂನು ಅಡ್ಡಿಯಿಂದ ಯೋಜನೆ ಸ್ಥಗಿತ

ಮಧ್ಯ ಕರ್ನಾಟಕದ ಹತ್ತಾರು ಜಿಲ್ಲೆಗಳ ಜನತೆಗೆ ಕುಡಿಯುವ ನೀರಿನ ಭರವಸೆ ಮೂಡಿಸಿರುವ ಈ ಯೋಜನೆಯಡಿ ಅರಣ್ಯ ಇಲಾಖೆಗೆ ಸೇರಿದ ಐದಳ್ಳ ಕಾವಲು ಪ್ರದೇಶದ ಮೂಲಕ ಹಾದು ಹೋಗುವ ಕಾಮಗಾರಿಗೆ ಕಾನೂನಾತ್ಮಕ ಅಡ್ಡಿಗಳು ಎದುರಾಗಿದ್ದವು. ಈ ಅಡೆತಡೆಗಳನ್ನು ನಿವಾರಿಸಲು ರಾಜ್ಯ ಸರ್ಕಾರ ಕೇಂದ್ರ ಅರಣ್ಯ ಇಲಾಖೆಯೊಂದಿಗೆ ನಿರಂತರ ಪತ್ರ ವ್ಯವಹಾರ ನಡೆಸಿದ್ದು, ಕೊನೆಗೂ ಅನುಮತಿ ದೊರೆತ ಹಿನ್ನೆಲೆಯಲ್ಲಿ ಯೋಜನೆಗೆ ಹಸಿರು ನಿಶಾನೆ ದೊರಕಿದೆ.

ಮೊಬೈಲ್ ಬಳಕೆಯಿಂದ ಯುವಕರಲ್ಲಿ ಕ್ರಿಯಾಶೀಲತೆ ಕ್ಷೀಣ: ಪಾಲಾಕ್ಷ ಬೇಸರ

ಎಚ್ಚರಿಕೆಯಿಂದ ಬಳಕೆ ಮಾಡುವಂತೆ ರೋಟರಿ ಜಿಲ್ಲಾ ಗವರ್ನರ್ ಸಲಹೆ

• **ಕನ್ನಡಪ್ರಭ ವಾರ್ತೆ** ಚನ್ನರಾಯಪಟ್ಟಣ

ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಸಮಯ ಮತ್ತು ಮೌಲ್ಯಗಳಿಗೆ ಮಹತ್ವ ನೀಡಬೇಕು ಎಂದು ರೋಟರಿ ಜಿಲ್ಲಾ ಗವರ್ನರ್ ಕೆ. ಪಾಲಾಕ್ಷ ಹೇಳಿದರು.

ಚನ್ನರಾಯಪಟ್ಟಣ ರೋಟರಿ ಕ್ಲಬ್‌ಗೆ ಅಧಿಕೃತ ಭೇಟಿ ಹಿನ್ನೆಲೆ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿ ನಮ್ಮ ಮುಂದಿನ ಪೀಳಿಗೆಗೆ ಇದರ ಮಹತ್ವ ತಿಳಿಸಬೇಕು. ಮೊಬೈಲ್ ಬಳಕೆಗೆ ಹೆಚ್ಚಿನ ಸಮಯ ವಿನಿಯೋಗ ಮಾಡುತ್ತಿರುವುದರಿಂದ ನಮ್ಮ ಯುವಜನರಲ್ಲಿ ಕ್ರಿಯಾಶೀಲತೆ ಕಡಿಮೆಯಾಗುತ್ತಿದೆ. ಎಚ್ಚರವಹಿಸಿ ಮೊಬೈಲ್ ಬಳಕೆ ಮಾಡಬೇಕು ಎಂದರು.

ಕಳೆದ 14 ವರ್ಷಗಳಿಂದ ಚನ್ನರಾಯಪಟ್ಟಣ ಕ್ಲಬ್ ಮಾದರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಸದಾ ಚಟುವಟಿಕೆಯಿಂದ ಕೂಡಿದ ಕ್ಲಬ್ ಇದಾಗಿದೆ. ಪ್ರಸಕ್ತ ಸಾಲಿನಲ್ಲಿ 80ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ದಾಖಲಿಸಿರುವುದು ಹೆಮ್ಮೆಯ ಸಂಗತಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಗ್ಲೋಬಲ್ ಗ್ರಾಂಟ್: ಇದುವರೆಗಿನ ಎಲ್ಲಾ ಅವಧಿಗಿಂತ ಹೆಚ್ಚು ಟಿಆರ್‌ಎಫ್ ಫಂಡ್ ಅನ್ನು ಈ ವರ್ಷ ಕ್ಲಬ್ ನೀಡಿದೆ. ಪ್ರಸಕ್ತ ವರ್ಷದಲ್ಲಿ ಜಿಲ್ಲೆಯಲ್ಲಿ 5 ಹೊಸ ಕ್ಲಬ್ ಮತ್ತು 20 ರೋಟರಾಕ್ಟ್ ಕ್ಲಬ್‌ಗಳನ್ನು ಪ್ರಾರಂಭಿಸಿದ್ದು, ಜಿಲ್ಲೆಯಲ್ಲಿ 1.47ಕೋಟಿ ರು. ಟಿಆರ್.ಎಫ್ ಸಂಗ್ರಹಿಸುವ ಮೂಲಕ ಹೊಸ ದಾಖಲೆ ಬರೆಯಲಾಗಿದೆ. ತಾಲೂಕು ಕ್ಲಬ್ 1.10 ಲಕ್ಷ ರು. ಗಳನ್ನು ನೀಡಿದೆ. ಶಿವಮೊಗ್ಗ ಜಿಲ್ಲೆಗೆ 1.3 ಕೋಟಿ ರು. ಗ್ಲೋಬಲ್ ಗ್ರಾಂಟ್ ಬಂದಿದ್ದು, ಮುಂಬರುವ ದಿನಗಳಲ್ಲಿ ಹಾಸನ ಜಿಲ್ಲೆಗೂ ಬರುವಂತಾಗಲಿ ಎಂದು ಹೇಳಿದರು.



ಪುರಸ್ಕಾರ: ಪ್ರತಿಭಾವಂತ ವಿದ್ಯಾರ್ಥಿಗಳನ್ನು ಇದೇ ವೇಳೆ ಗಣ್ಯರು ಅಭಿನಂದಿಸಿದರು. 14 ವರ್ಷದೊಳಗಿನವರ ಕ್ರಿಕೆಟ್ ಪಂದ್ಯದಲ್ಲಿ ರಾಜ್ಯ ಮಟ್ಟದಲ್ಲಿ ಪ್ರತಿನಿಧಿಸಿದ್ದ ದುಷ್ಯಂತ್ ಗೌಡ, ಸರ್ಕಾರಿ ಶಾಲೆಯಲ್ಲಿ ಹತ್ತನೇ ತರಗತಿಯಲ್ಲಿ ಹೆಚ್ಚು ಅಂಕಗಳಿಸಿದ ಲತಿಕಾ, ದ್ವಿತೀಯ ಪಿ ಯುಸಿ ಸಾಧಕರಾದ ಜಿ.ಆರ್.ಭಾಸ್ಕರ್, ಅಂಕಿತಾ ಮತ್ತು ಧನಲಕ್ಷ್ಮೀ ಕ್ಲಬ್ ವತಿಯಿಂದ ಗೌರವಿಸಲಾಯಿತು.

ಕ್ಲಬ್ ಸದಸ್ಯರ ಪ್ರತಿಭಾವಂತ ಮಕ್ಕಳಿಗೂ ನೆನಪಿನ ಕಾಣಿಕೆಗಳನ್ನು ನೀಡಲಾಯಿತು. ಹಿರೀಸಾವೆ ಪದವಿ ಪೂರ್ವ ಕಾಲೇಜಿಗೆ ಕ್ಲಬ್ ವತಿಯಿಂದ ಶುದ್ಧ ಕುಡಿಯುವ ನೀರಿನ ಯಂತ್ರವನ್ನು ಪ್ರಾಂಶುಪಾಲ ಆರಾಧ್ಯ ಅವರಿಗೆ ನೀಡಲಾಯಿತು. ತಾಲೂಕು ಕ್ಲಬ್ ಅಧ್ಯಕ್ಷೆ ಎನ್.ಬಿ.ಜ್ಯೋತಿಶ್ರೀನಿವಾಸ್, ಕಾರ್ಯದರ್ಶಿ ಎ.ಆರ್. ಹೇಮಚಂದ್ರ, ಸಹಾಯಕ ಗವರ್ನರ್ ಜೆ.ಎನ್. ಮಂಜುನಾಥ್, ಗಿರೀಶ್ ಅಡವಿಗೌಡ, ರೇಖಾಪಾಲಾಕ್ಷ ಇದ್ದರು.

ಇಂದಿರಾ ಕ್ಯಾಂಟೀನ್ ಸ್ವಚ್ಛತೆ ಪರಿಶೀಲನೆ

ಒಲೆಯಲ್ಲಿ ಆಹಾರ ತಯಾರಿಕೆ | ಪುರಸಭಾ ಅಧ್ಯಕ್ಷೆ ಉಷಾ ಮೆಚ್ಚುಗೆ

• **ಕನ್ನಡಪ್ರಭ ವಾರ್ತೆ** ಬೇಲೂರು

ಪಟ್ಟಣದ ಇಂದಿರಾ ಕ್ಯಾಂಟೀನ್‌ಗೆ ಪುರಸಭಾ ಅಧ್ಯಕ್ಷೆ ಉಷಾ ಸತೀಶ್ ಭೇಟಿ ನೀಡಿ ಸ್ವಚ್ಛತೆ ಹಾಗೂ ಮೂಲಭೂತ ಸೌಲಭ್ಯಗಳ ಪರಿಶೀಲನೆ ನಡೆಸಿದರು.

ಕ್ಯಾಂಟೀನ್‌ನಲ್ಲಿ ಆಹಾರದ ಗುಣಮಟ್ಟ, ಸ್ವಚ್ಛತೆ ಹಾಗೂ ಸಾರ್ವಜನಿಕರಿಗೆ ನೀಡಲಾಗುತ್ತಿರುವ ಸೇವೆಗಳ ಬಗ್ಗೆ ಮಾಹಿತಿ ಪಡೆದು ಮಾತನಾಡಿ ಅವರು ಕಡಿಮೆ ದರದಲ್ಲಿ ಬೆಳಗಿನ ತಿಂಡಿಗೆ 5 ಮತ್ತು ಊಟಕ್ಕೆ 10 ರು. ಗೆ ಆಹಾರ ಒದಗಿಸುವ ಯೋಜನೆ ಬಡವರು ಹಾಗೂ ವೃದ್ಧರಿಗೆ ಬಹಳ ಅನುಕೂಲಕರವಾಗಿದೆ. ವಯಸ್ಸಾದವರು ಹಾಗೂ ವಿದ್ಯಾರ್ಥಿಗಳಿಗೆ ಸಮಯಕ್ಕೆ ಸರಿಯಾಗಿ ಆಹಾರ ದೊರಕುತ್ತಿರುವುದು ಮಹತ್ವದ ಸಹಾಯವಾಗಿದೆ. ಕ್ಯಾಂಟೀನ್‌ನಲ್ಲಿ ಉತ್ತಮ ಸ್ವಚ್ಛತೆಯನ್ನು ಕಾಪಾಡಿಕೊಂಡಿರುವುದರ ಜೊತೆಗೆ, ಗ್ಯಾಸ್ ಕೊರತೆಯಿದ್ದರೂ ಸಿಬ್ಬಂದಿ ಸೌದೆ ಒಲೆಯಲ್ಲಿ ಅಡುಗೆ ಮಾಡಿ ಯಾರಿಗೂ ತೊಂದರೆಯಾಗದಂತೆ ಊಟ ಕೊಡುತ್ತಿದ್ದಾರೆ ಎಂದರು.

ಪುರಸಭೆ ಮಾಜಿ ಅಧ್ಯಕ್ಷೆ ಸದಸ್ಯೆ ತೀರ್ಥಕುಮಾರಿ ವೆಂಕಟೇಶ್ ಮಾತನಾಡಿ, ಹಿಂದಿನ ಸಿದ್ದರಾಮಯ್ಯ ಸರ್ಕಾರದಲ್ಲಿ ಆರಂಭವಾದ ಇಂದಿರಾ ಕ್ಯಾಂಟೀನ್ ಯೋಜನೆ ಅತ್ಯಂತ ಯಶಸ್ವಿ ಮತ್ತು ಜನಪ್ರಿಯವಾಗಿದ್ದು, ಬಡವರು, ವಯಸ್ಸಾದವರು, ಕೂಲಿ ಕಾರ್ಮಿಕರು ಹಾಗೂ ವಿದ್ಯಾರ್ಥಿಗಳಿಗೆ ಇದು ಬಹಳ ಅನುಕೂಲವಾಗುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಸರ್ಕಾರದ 'ಶಕ್ತಿ ಯೋಜನೆ'ಯಿಂದ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯ ದೊರಕುತ್ತಿರುವುದರಿಂದ ದೇವಸ್ಥಾನಗಳಿಗೆ ಭೇಟಿ ನೀಡುವ ಮಹಿಳೆಯರ ಸಂಖ್ಯೆ ಹೆಚ್ಚಾಗಿದೆ. ಅವರಿಗೆ ಸಹ ಇಂದಿರಾ ಕ್ಯಾಂಟೀನ್‌ನಲ್ಲಿ ಕಡಿಮೆ ದರದಲ್ಲಿ ಊಟದ ವ್ಯವಸ್ಥೆ ಲಭ್ಯವಾಗುತ್ತಿರುವುದು ಮತ್ತೊಂದು ಸಕಾರಾತ್ಮಕ ಬೆಳವಣಿಗೆಯಾಗಿದೆ ಎಂದು ಹೇಳಿದರು. ಪ್ರಸ್ತುತ ಗ್ಯಾಸ್ ಕೊರತೆ ದೊಡ್ಡ ಸಮಸ್ಯೆಯಾಗಿದ್ದು ತಕ್ಷಣ ಕ್ರಮ ಕೈಗೊಂಡು ಗ್ಯಾಸ್ ವ್ಯವಸ್ಥೆಯನ್ನು ಒದಗಿಸಬೇಕು. ಇದರಿಂದ ಸಿಬ್ಬಂದಿಗೂ ಹೆಚ್ಚಿನ ಅನುಕೂಲ ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಪುರಸಭೆ ಮುಖ್ಯಾಧಿಕಾರಿ ಬಸವರಾಜು ಶಿಗ್ಗಾಂವಿ, ಆರೋಗ್ಯಾಧಿಕಾರಿ ಲೋಹಿತ್ ಇದ್ದರು.

ಪ್ರತಿಫಲ ನಿರೀಕ್ಷೆಯಿಲ್ಲದ ಪ್ರಯತ್ನಕ್ಕೆ ಎಂದಿಗೂ ಜಯ ಇದೆ: ಗಂಗಾಧರ್

ಚ ರಾ. ಪಟ್ಟಣದಲ್ಲಿ ಪ್ರತಿಭಾ ಪುರಸ್ಕಾರ, ಸಾಧಕರಿಗೆ ಸನ್ಮಾನ



ವಿಪ್ರ ನೌಕರರ ಸಂಘದಿಂದ ನಡೆದ ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ ಕಾರ್ಯಕ್ರಮದಲ್ಲಿ ಪದ್ಮಶ್ರೀ ಪುರಸ್ಕೃತ ಡಾ. ಬಿ.ಎನ್. ಗಂಗಾಧರ್ ಅವರು ಸಾಧಕರನ್ನು ಸನ್ಮಾನಿಸಿದರು.

• **ಕನ್ನಡಪ್ರಭ ವಾರ್ತೆ** ಚನ್ನರಾಯಪಟ್ಟಣ

ಪ್ರತಿಫಲದ ನಿರೀಕ್ಷೆಯಿಲ್ಲದ ಪ್ರಯತ್ನಕ್ಕೆ ಎಂದಿಗೂ ಜಯ ಇದೆ ಎಂದು ರಾಷ್ಟ್ರೀಯ ವೈದ್ಯಕೀಯ ಆಯೋಗದ ಅಧ್ಯಕ್ಷ ಹಾಗೂ ಪದ್ಮಶ್ರೀ ಪುರಸ್ಕೃತ ಡಾ.ಬಿ.ಎನ್.ಗಂಗಾಧರ್ ಹೇಳಿದರು.

ತಾಲೂಕು ವಿಪ್ರ ನೌಕರರ ಸಂಘದ ವತಿಯಿಂದ ಕೋಟೆ ಬ್ರಾಹ್ಮಣ ವಿದ್ಯಾರ್ಥಿ ನಿಲಯದಲ್ಲಿ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜೀವನದಲ್ಲಿ ಅನುಶಾಸನಬದ್ಧ ವ್ರತವನ್ನು ಅಳವಡಿಸಿಕೊಳ್ಳಬೇಕು. ಕೇವಲ ವಿದ್ಯೆಯಿಂದಷ್ಟೇ ವೃತ್ತಿ ಅಲ್ಲ. ಯಾವುದೇ ಕ್ಷೇತ್ರದಲ್ಲಿದ್ದರೂ ಕೌಶಲಯುತ ವಿದ್ಯೆ ನಮ್ಮದಾಗಬೇಕು. ಇತರರಿಗೆ ನೋವಾಗದಂತೆ ನಮ್ಮ ವೃತ್ತಿ ಇರಬೇಕು. ಸಮಾಜದಲ್ಲಿ ಸತ್ಪ್ರಜೆಯಾಗಿ ಪೂರಕ ಜೀವನ ಮಾಡುವುದನ್ನು ಕಲಿಯಬೇಕು. ರಾಷ್ಟ್ರಕ್ಕಾಗಿ - ನಮ್ಮ ವ್ಯಕ್ತಿತ್ವ ವಿಕಸನವಾಗಬೇಕು. ಆಗ ಮಾತ್ರ ಅದು ಮುಕುಟಪ್ರಾಯವಾಗುತ್ತದೆ ಎಂದು ಅವರು ಹೇಳಿದರು..

ನಮ್ಮ ವ್ಯಾಸಂಗ, ವೃತ್ತಿ, ವ್ಯವಹಾರದ ಜತೆ ತತ್ಪರತೆಯೂ ನಮ್ಮ ಮಂತ್ರವಾಗಬೇಕು. ಆರೋಗ್ಯ ಪಾಲನೆಯತ್ತಲೂ ಆದ್ಯತೆ ನೀಡಬೇಕು. ಮಾನಸಿಕ ಮತ್ತು ಶಾರೀರಿಕ ಸದೃಢತೆಯಿದ್ದರೆ ಪರಿಶ್ರಮ ಸಾಫಲ್ಯತೆಯನ್ನು ಪಡೆಯುತ್ತದೆ. ಭಗವದ್ಗೀತೆಯ ಅಭ್ಯಾಸದ ಮೂಲಕ ಮಾನಸಿಕ ಸ್ವಾಸ್ಥ್ಯವನ್ನು ಕಾಪಾಡಬಹುದು. ಸಮಾಜಮುಖಿ ಜೀವನದ ತಪಸ್ಸಿಗೆ ವಿಶೇಷ ಗಮನವಿರಬೇಕು. ಪ್ರಭಾವಿ ಯುವಸಮುದಾಯವಾಗಬೇಕು ಎಂದು ಹೇಳಿದರು.

ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವ ಗಣ್ಯರು ಹಾಗೂ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಅತಿಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮಕ್ಕೆ ಸಹಕಾರ ನೀಡಿದವರನ್ನು ನೆನಪಿನ ಕಾಣಿಕೆಯೊಂದಿಗೆ ಗೌರವಿಸಲಾಯಿತು. ಸಂಘದ ಅಧ್ಯಕ್ಷ ಎಚ್. ಎಂ.ಶ್ರೀಕಂಠ, ತಾಲೂಕು ಬ್ರಾಹ್ಮಣ ಸಂಘದ ಅಧ್ಯಕ್ಷ ಸಿ.ಎನ್. ಸುಬ್ರಹ್ಮಣ್ಯ ಮತ್ತಿತರರು ಇದ್ದರು.

ಕೊಡುಗೆ ಸ್ಮರಣೆ | ಡಾ. ಬಿ. ಆರ್. ಅಂಬೇಡ್ಕರ್– ಡಾ. ಬಾಬು ಜಗಜೀವನ್ ರಾಮ್ ಜಯಂತಿ ಆಚರಣೆಯಲ್ಲಿ ವೆಂಕಟೇಶ್ ಬಣ್ಣನೆ

ಅಂಬೇಡ್ಕರ್, ಜಗಜೀವನ ರಾಮ್ ಸಮಾಜದ 2 ಕಣ್ಣುಗಳು

• **ಕನ್ನಡಪ್ರಭ ವಾರ್ತೆ** ಚನ್ನರಾಯಪಟ್ಟಣ

ಅಂಬೇಡ್ಕರ್ ಮತ್ತು ಬಾಬು ಜಗಜೀವನರಾಮ್ ಈ ಸಮಾಜದ ಎರಡು ಕಣ್ಣುಗಳಿದ್ದಂತೆ, ಡಾ. ಅಂಬೇಡ್ಕರ ಜಾತಿ ದೌರ್ಜನಗಳನ್ನು ಎದುರಿಸಿ ಬೆಳೆದು ಬಂದವರು ಎಂದು ಕರ್ನಾಟಕ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಅಧ್ಯಕ್ಷರಾದ ಎಂ. ಆರ್. ವೆಂಕಟೇಶ್ ತಿಳಿಸಿದರು.

ಪಟ್ಟಣದ ಆಂಜನೇಯ ದೇವಸ್ಥಾನದ ಮುಂಭಾಗದ ವೇದಿಕೆಯಲ್ಲಿ ಆದಿಜಾಂಬವ ಸಮಾಜ ಹಾಗೂ ಮಾದಿಗ ದಂಡೋರ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ ಡಾ. ಬಿ. ಆರ್. ಅಂಬೇಡ್ಕರ್ ಅವರ 135ನೇ ಜಯಂತಿ ಹಾಗೂ ಡಾ. ಬಾಬು ಜಗಜೀವನ್ ರಾಮ್ 119ನೇ ಜಯಂತಿ ಕಾರ್ಯಕ್ರಮದಲ್ಲಿ ಭೀಮರಾವ್ ಡಾ. ಅಂಬೇಡ್ಕರ್ ಮತ್ತು ಜಗಜೀವನ್ ರಾಮ್ ಅವರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಸಲ್ಲಿಸಿದ ಬಳಿಕ ಮಾತನಾಡಿದರು.

ಡಾ. ಬಿ. ಆರ್. ಅಂಬೇಡ್ಕರ್ ಅವರು ಈ ದೇಶಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ, ಭಾರತದ ಸಂವಿಧಾನದ ಫಲವಾಗಿ ಇಂದು ಈ ದೇಶದ ಪ್ರತಿಯೊಬ್ಬ ಪ್ರಜೆಯು ಶಾಂತಿ ಮತ್ತು ಮೈತ್ರಿ ಹಾಗೂ ನೆಮ್ಮದಿಯಿಂದ ಜೀವನ ನಡೆಸುತ್ತಿದ್ದಾರೆ ಎಂದರು. ಭಾರತದ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರು ಶೋಷಣೆಯ ವಿರುದ್ಧ ಸಮಾನತೆಗಾಗಿ ಹೋರಾಡಿದ ಮಹಾನ್ ಚೇತನ್ ಆಗಿದ್ದಾರೆ, ಅವರ ಜಯಂತಿಯನ್ನು ಎಲ್ಲಾ ಸಮುದಾಯದವರು ಒಂದಾಗಿ ಆಚರಿಸುವ ಮೂಲಕ ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯುವ ಮಹತ್ವದ ಹೆಜ್ಜೆಯನ್ನು ಇಡಬೇಕಾಗಿದೆ ಎಂದರು.



ಚನ್ನರಾಯಪಟ್ಟಣದ ಹಳೆ ಬಸ್ ನಿಲ್ದಾಣದ ಬೀದಿಯು ನೀಲಿ ಬಂಟಿಂಗ್ಸ್‌ಗಳಿಂದ ಕಂಗೊಳಿಸುತ್ತಿತ್ತು.

ರಮೇಶ್ ಚಕ್ರವರ್ತಿ ಮಾತನಾಡಿ ಬಾಬಾ ಸಾಹೇಬರು ಬಾಲ್ಯದಲ್ಲಿ ಅಸ್ಪೃಶ್ಯತೆಯಂತಹ ಅಮಾನವೀಯ ನೋವುಗಳನ್ನು ಅನುಭವಿಸಿದರೂ ಅದನ್ನು ಧೈರ್ಯದಿಂದ ಎದುರಿಸಿ ದೇಶಕ್ಕೆ ಶ್ರೇಷ್ಠ ಸಂವಿಧಾನ ನೀಡಿದ ಮೇರು ಪರ್ವತ ಎಂದರು.

ಅಂಬೇಡ್ಕರ್ ಅವರ ಸಾಧನೆ ದೊಡ್ಡದು ಎಂದು ಬಣ್ಣಿಸಿದರು. ಇಂದು ನಾವು ಅನುಭವಿಸುತ್ತಿರುವ ಸಮಾನತೆ ಮತ್ತು ಸಹೋದರತ್ವ ಹಾಗೂ ನೆಮ್ಮದಿಯ ಬದುಕಿಗೆ ಅವರು ಹಾಕಿಕೊಟ್ಟ ಸಂವಿಧಾನದ ಬುನಾದಿಯೇ ಮುಖ್ಯ ಕಾರಣ ಎಂದು ನೆನಪಿಸಿದ ಅವರು, ಈ ಸಂವಿಧಾನದ ಮೌಲ್ಯಗಳನ್ನು ಯುವ ಪೀಳಿಗೆಗೆ ನಿರಂತರವಾಗಿ ತಿಳಿಸಿಕೊಡುವ ಕೆಲಸ ಮಾಡಬೇಕಾಗಿದೆ ಎಂದರು.

ಮೈಸೂರಿನ ವಕೀಲರಾದ ಎಸ್. ಅರುಣ್ ಕುಮಾರ್ ಮಾತನಾಡಿ ಒಳ ಮೀಸಲಾತಿಯಲ್ಲಿ ಮಾದಿಗ ಸಮಾಜಕ್ಕೆ ಶೇ 5.25 ಮೀಸಲಾತಿ ಸಿಕ್ಕಿರುವುದರಿಂದ ಅನೇಕ ವರ್ಷದ ಹೋರಾಟಕ್ಕೆ ಯಶಸ್ಸು ದೊರಕಿದೆ. ಆದರೆ ರೋಸ್ಟರ್ ಬಿಂದುವಿನಲ್ಲಿ ಕುತಂತ್ರ ಇದೆ. ಬಡ್ತಿಯಲ್ಲಿ ಮೀಸಲಾತಿ ದೊರಕುವುದಿಲ್ಲ. ಎಲ್ಲೆಲ್ಲಿ ಮೀಸಲಾತಿ ನೀಡಲಾಗುತ್ತದೆಯೋ ಅಂಥ ಕಡೆ ಒಳಮೀಸಲಾತಿ ಅನುಷ್ಠಾನಗೊಳಿಸಬೇಕು ಎಂದರು, ನಮ್ಮ ಸಮಾಜದ ಮುಖಂಡರು ಯಾವುದೇ ರಾಜಕೀಯ ಪಕ್ಷದಲ್ಲಿದ್ದರೂ ಅಂಥವರನ್ನು ಗುರುತಿಸಿ ಪ್ರೋತ್ಸಾಹಿಸಬೇಕು ಎಂದರು.

ನಗರದ ಹಳೆ ಬಸ್ ನಿಲ್ದಾಣದ ಬೀದಿಯಲ್ಲಿ ನೀಲಿ ಬಂಟಿಂಗ್ಸ್‌ಗಳಿಂದ ಕಂಗೊಳಿಸುತ್ತಿತ್ತು. ತಾಲೂಕು ಕಚೇರಿಯ ಮುಂಭಾಗದಿಂದ ಕಲಾತಂಡಗಳೊಂದಿಗೆ ತಮಟೆ ವಾದ್ಯಗಳೊಂದಿಗೆ ಮೆರವಣಿಗೆ ಅಂಬೇಡ್ಕರ್ ಹಬ್ಬದ ಸಂಭ್ರಮವನ್ನು ಹೆಚ್ಚಿಸಿದ್ದಲ್ಲದೆ, ಒಗ್ಗಟ್ಟಿನ ಶಕ್ತಿ ಪ್ರದರ್ಶನ ಎದ್ದು ಕಾಣುತ್ತಿತ್ತು. ಕಾರ್ಯಕ್ರಮದಲ್ಲಿ ಮಾಜಿ ತಾಲೂಕು ಪಂಚಾಯತಿ ಅಧ್ಯಕ್ಷರಾದ ಸಿ.ಆರ್.ಮಂಜುನಾಥ್, ಆದಿಜಾಂಬವ ಯುವಸೇನೆ ರಾಜ್ಯಾಧ್ಯಕ್ಷರಾದ ಎಸ್. ಎಂ. ರಮೇಶ್ ಚಕ್ರವರ್ತಿ, ಅರುಂಧತಿಯಾರ್ ಮಹಾಸಭಾ ರಾಜ್ಯಾಧ್ಯಕ್ಷರಾದ ಆರ್‌ಕೃಷ್ಣ, ದಲಿತ ಸೇನಾ ಪಡೆಯ ಜಿಲ್ಲಾಧ್ಯಕ್ಷರಾದ ದಂಡೋರ ಮಂಜುನಾಥ್, ದಸಂಸ ಜಿಲ್ಲಾ ಸಂಚಾಲಕರಾದ ವಿರೂಪಾಕ್ಷಪುರ ಪ್ರಕಾಶ್, ಕಲ್ಕೆರೆ ರಂಗಸ್ವಾಮಿ, ಪುರಸಭಾ ಮಾಜಿ ಸದಸ್ಯರಾದ ಪರಶುರಾಮ್, ಪರಮೇಶ್, ಆದಿಜಾಂಬವ ಅಭಿವೃದ್ಧಿ ಸಂಘದ ನಿರ್ದೇಶಕರಾದ ಶ್ರೀನಿವಾಸ್, ಆದಿ ಜಾಂಬವ ಸಂಘಟನೆಯ ಮುಖಂಡರಾದ ಡಿಎಂಎಸ್ ಮಾದೇಶ್, ರಾಜಣ್ಣ ಮಾಸ್ಟರ್, ಎ ಡಿ ಕಾಲೋನಿ ರಾಜಣ್ಣ, ಕಲಸಿಂದ ಲಕ್ಷ್ಮಣ್, ಮಾದಿಗ ದಂಡೋರ ಜಿಲ್ಲಾ ಸಂಘಟನೆಯ ಅಧ್ಯಕ್ಷರಾದ ಅರುವನಹಳ್ಳಿ ರಾಮಚಂದ್ರ, ಮೂರ್ತಿ, ನರಸಿಂಹ, ಕಲ್ಕೆರೆ ರಾಮಚಂದ್ರ, ಎಡಿಕಾಲೋನಿ ಅಣ್ಣಪ್ಪ, ಇಂದ್ರಕುಮಾರ್, ಸಿ ಎಂ ಗಣೇಶ್, ಧರ್ಮೇಂದ್ರ, ಮಾದರ ಮಹಾಸಭಾ ತಾಲೂಕು ಅಧ್ಯಕ್ಷರಾದ ಪುನೀತ್, ಧರ್ಮೇಶ್, ಅರಳಿಕಟ್ಟೆ ರಮೇಶ್, ಗುರಿಗಾರನಹಳ್ಳಿ ಯೋಗೇಶ್, ರೇಣುಕಾನಗರ ಕೃಷ್ಣ, ಮಂಜುನಾಥ್ ಹಾಜರಿದ್ದರು.

ಸುದ್ದಿ ಸಿಂಚನ

ಭಾರೀ ಮಳೆಗೆ ವಿದ್ಯುತ್ ಕಂಬದ ಮೇಲೆ ಬಿದ್ದ ಮರ

ಸಕಲೇಶಪುರ: ಚಂಗಡಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗೋನಳ್ಳಿ ಗ್ರಾಮದಲ್ಲಿ ಕಳೆದ ಮಂಗಳವಾರ ರಾತ್ರಿ ಸುರಿದ ಭಾರೀ ಮಳೆಯಿಂದ ಮರೊಂದು ವಿದ್ಯುತ್ ಕಂಬದ ಮೇಲೆ ಬಿದ್ದು, ಕಂಬ ಮುರಿದು ಬಿದ್ದ ಪರಿಣಾಮ ಗ್ರಾಮಸ್ಥರು ಕತ್ತಲಿನಲ್ಲಿ ದಿನ ಕಳೆಯುವಂತಾಗಿದೆ. ಘಟನೆಯಿಂದಾಗಿ ಗ್ರಾಮದಲ್ಲಿನ ಮನೆಗಳಿಗೆ ವಿದ್ಯುತ್ ಸರಬರಾಜು ಸಂಪೂರ್ಣವಾಗಿ ಸ್ಥಗಿತಗೊಂಡಿದ್ದು, ನಿವಾಸಿಗಳು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ. ಇದರ ಜೊತೆಗೆ ವಿದ್ಯುತ್ ತಂತಿಗಳು ರಸ್ತೆಯ ಮೇಲೆ ಬಿದ್ದಿರುವುದರಿಂದ ಸಾರ್ವಜನಿಕರ ಸಂಚಾರಕ್ಕೂ ಅಡಚಣೆ ಉಂಟಾಗಿದೆ. ಯಾವುದೇ ಕ್ಷಣದಲ್ಲಿ ಅಪಘಾತ ಸಂಭವಿಸುವ ಸಾಧ್ಯತೆ ಹೆಚ್ಚಾಗಿದೆ. ಸ್ಥಳೀಯರು ತಕ್ಷಣವೇ ಸಂಬಂಧಪಟ್ಟ ವಿದ್ಯುತ್ ಇಲಾಖೆಗೆ ಮಾಹಿತಿ ನೀಡಿದರೂ, ಒಂದು ವಾರದಿಂದ ದುರಸ್ತಿ ಕಾರ್ಯ ನಡೆದಿಲ್ಲ ಎಂದು, ಗ್ರಾಮಸ್ಥರು ಆರೋಪ ಮಾಡುತ್ತಿದ್ದಾರೆ. ಈ ಕುರಿತು ಪ್ರತಿಕ್ರಿಯಿಸಿದ ಕಾಂಗ್ರೆಸ್ ಮುಖಂಡ ನಾಗನಹಳ್ಳಿ ಅಶೋಕ್ ಕುಮಾರ್, ಮರ ಬಿದ್ದ ಪರಿಣಾಮ ಹಲವು ದಿನಗಳಿಂದ ಗ್ರಾಮ ಕತ್ತಲಿನಲ್ಲಿ ಮುಳುಗಿದೆ. ಅಧಿಕಾರಿಗಳು ಕೂಡಲೇ ಸ್ಥಳಕ್ಕೆ ಭೇಟಿ ನೀಡಿ, ವಿದ್ಯುತ್ ಕಂಬವನ್ನು ದುರಸ್ತಿ ಮಾಡಬೇಕು. ರಸ್ತೆ ಮೇಲೆ ಬಿದ್ದಿರುವ ತಂತಿಗಳನ್ನು ತೆರವುಗೊಳಿಸಿ ಸಾರ್ವಜನಿಕರ ಸುರಕ್ಷತೆಯನ್ನು ಖಚಿತಪಡಿಸಬೇಕು ಎಂದು ಗ್ರಾಮಸ್ಥರ ಪರವಾಗಿ ಒತ್ತಾಯಿಸಿದ್ದಾರೆ.



ಬಿಜೆಪಿ ಮುಖಂಡ ಸಿ.ಆರ್ ಚಿದಾನಂದ್ ಹುಟ್ಟುಹಬ್ಬ ಆಚರಣೆ

ಚನ್ನರಾಯಪಟ್ಟಣ: ತಾಲೂಕು ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದ ಬಿಜೆಪಿ ಮುಖಂಡ ಸಿ.ಆರ್ ಚಿದಾನಂದ್ ಅವರ 37ನೇ ವರ್ಷದ ಹುಟ್ಟುಹಬ್ಬವನ್ನು ಅದ್ದೂರಿಯಾಗಿ ತಾಲೂಕಿನಾದ್ಯಂತ ನಾನಾ ಕಡೆ ಆಚರಿಸಲಾಯಿತು. ಪಟ್ಟಣದ 40 ಅಡಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಅಭಿಮಾನಿಗಳು ವಿಶೇಷ ಪೂಜೆಯನ್ನ ನೆರವೇರಿಸಿ ಬೃಹತ್ ಗಾತ್ರದ ಹೂವಿನ ಹಾರವನ್ನು ಚಿದಾನಂದ್ ಅವರಿಗೆ ಹಾಕಿ ಕೇಕ್ ಕತ್ತರಿಸುವ ಮೂಲಕ ಹುಟ್ಟುಹಬ್ಬ ಆಚರಿಸಿದರು. ನಂತರ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಹುಟ್ಟುಹಬ್ಬ ಆಚರಿಸಿ ತಾಲೂಕಿನಲ್ಲಿ ಬಿಜೆಪಿ ಪಕ್ಷವನ್ನ ಸದೃಢವಾಗಿ ಕಟ್ಟಲು ಚಿದಾನಂದ್ ಅವರ ಪರಿಶ್ರಮ ಸಾಕಷ್ಟಿದ್ದು ಅವರಿಗೆ ದೇವರು ಆರೋಗ್ಯ, ಐಶ್ವರ್ಯ, ಅಧಿಕಾರ ನೀಡಲಿ ಎಂದು ದೇವರಲ್ಲಿ ಪ್ರಾರ್ಥಿಸಿದರು. ಹೊಸಕೊಪ್ಪಲಿನ ಶಕ್ತಿಮಠದ ಬಸವೇಶ್ವರ ಚೈತನ್ಯ ಸ್ವಾಮೀಜಿಗಳ ಆಶೀರ್ವಾದ ಪಡೆದ ಚಿದಾನಂದ್ ಕುಟುಂಬದವರು ನಂತರ ಹೊಸ ಬಸ್ ನಿಲ್ದಾಣ, ಹಳೆ ಬಸ್ ನಿಲ್ದಾಣದ, ಮೈಸೂರು ರಸ್ತೆ ಸೇರಿದಂತೆ ನಾನಾ ಕಡೆಯ ಆಟೋ ಚಾಲಕರ ಸಂಘದವರು ಚಿದಾನಂದ್ ಅವರನ್ನು ಕರೆಸಿ ಗೌರವಿಸಿದರು. ಪಟ್ಟಣದ ನವೋದಯ ವೃತ್ತದ ಬಳಿ ಡಿವೈಎಸ್‌ಪಿ ಕುಮಾರ್‌ಅವರು ಬೈಕ್ ಚಾಲಕರಿಗೆ ಉಚಿತವಾಗಿ ಹೆಲ್ಮೆಟ್ ವಿತರಿಸುವ ಮೂಲಕ ಚಿದಾನಂದ್ ಅವರಿಗೆ ಹುಟ್ಟುಹಬ್ಬದ ಶುಭಾಶಯಗಳನ್ನು ಕೋರಿದರು. ಡಾ.ರಾಜಕುಮಾರ್‌ಧಾಮ ಹಾಗೂ ಡಾ. ಪುನೀತ್ ರಾಜಕುಮಾರ್‌ಉದ್ಯಾನವನದಲ್ಲಿ ಗಿಡ ನೆಡುವ ಮೂಲಕ ಅರ್ಥಪೂರ್ಣವಾಗಿ ಹುಟ್ಟು ಹಬ್ಬವನ್ನು ಆಚರಿಸಿಕೊಂಡ ಸಿ. ಆರ್. ಚಿದಾನಂದ್ ಅವರು ನಂತರ ಮಕ್ಕಳಿಗೆ ಕೇಕ್ ಹಾಗೂ ಸಿಹಿ ವಿತರಿಸಿ ಮಾತನಾಡಿ ತಾಲೂಕಿನ ಜನತೆಯ ಪ್ರೀತಿ ವಿಶ್ವಾಸಕ್ಕೆ ನಾನು ಚಿರಋಣಿ ಅವರು ನೀಡುವ ಪ್ರೀತಿಯನ್ನ ನಾನು ಎಂದಿಗೂ ಮರೆಯುವುದಿಲ್ಲ, ತಾಲೂಕಿನಲ್ಲಿ ಬಿಜೆಪಿ ಪಕ್ಷವನ್ನ ಸದೃಢವಾಗಿ ಕಟ್ಟಲು ಶ್ರಮಿಸುವುದಾಗಿ ತಿಳಿಸಿದರು. ಇದೇ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ದಮ್ಮನಿಂಗಲ ರವಿ, ಮಂಜು ಗುಂಡಶೆಟ್ಟಿಹಳ್ಳಿ, ಜಗದೀಶ್ ಕೆರೆಬೀದಿ, ರಮೇಶ್, ಲಿಖಿತ್, ನಾಗೇಶ್, ಗಿರೀಶ್ ಕೆಂಬಾಳು, ರಾಕೇಶ್ ಮತ್ತಿತರಿದ್ದರು.

ಲೀಲಾವತಿ ನಿಧನ

ಹೊಳೆನರಸೀಪುರ: ಪಟ್ಟಣದ ಸೀತವಿಲಾಸ ರಸ್ತೆಯ ನಿವಾಸಿ ಹಾಗೂ ತಾಲೂಕು ಕಸಾಪ ಅಧ್ಯಕ್ಷ ಆರ್.ಬಿ. ಪುಟ್ಟೇಗೌಡರ ಪತ್ನಿ ಲೀಲಾವತಿ (58) ಅನಾರೋಗ್ಯದಿಂದ ನಿಧನರಾ ದರು. ಕೆಲವು ತಿಂಗಳಿಂದ ಬ್ರೈನ್ ಟ್ಯೂಮರ್‌ನಿಂದ ಬಳಲುತ್ತಿದ್ದ ಲೀಲಾವತಿ ಅವರಿಗೆ ಶಸ್ತ್ರಚಿಕಿತ್ಸೆ ಮಾಡಿಸಲಾಗಿತ್ತಾದರೂ ಚಿಕಿತ್ಸೆಗೆ ಸ್ಪಂದಿಸದೇ ಸೋಮವಾರ ಮುಂಜಾನೆ ಕೊನೆಯುಸಿರೆಳೆದರು. ಚನ್ನರಾಯ ಪಟ್ಟಣ ತಾಲೂಕಿನ ರಾಜಾಪುರ ಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಿತು.



ಸಾಲ ಕಟ್ಟದಕ್ಕೆ ಮನೆಗೆ ಬೀಗ ಜಡಿದ ಖಾಸಗಿ ಫೈನಾನ್ಸ್

ಮನೆಯಲ್ಲಿದ್ದ ಹೆಣ್ಣುಮಗಳನ್ನು ಹೊರಗೆ ಹಾಕಿ ಬೀಗ | ಬೀದಿಗೆ ಬಿದ್ದ ಕುಟುಂಬ | ನೆರವಿಗೆ ಧಾವಿಸಿದ ರೈತ ಸಂಘಟನೆ

• **ಕನ್ನಡಪ್ರಭ ವಾರ್ತೆ** ಆಲೂರು

ಸಾಲ ತೀರಿಸದ ಕಾರಣಕ್ಕೆ ಫೈನಾನ್ಸ್ ಕಂಪೆನಿಯೊಂದು ಸಾಲಗಾರನ ಮನೆಗೆ ಬೀಗ ಹಾಕಿದ ಕಾರಣ ಕುಟುಂಬ ಕಂಗಾಲಾಗಿದ್ದು, ರೈತ ಸಂಘಟನೆಯ ಮೊರೆ ಹೋಗಿದ್ದು, ರೈತ ಸಂಘಟನೆಯವರು ಮನೆಯ ಬೀಗ ಹೊಡೆದು ರೈತ ಸಂಘ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೋರ್ಟ್ ಆದೇಶದಂತೆ ಮನೆ ಜಪ್ತಿ ಮಾಡಿದ ಖಾಸಗಿ ಬ್ಯಾಂಕ್, ಮಾನವೀಯತೆಯೂ ಇಲ್ಲದೇ ಬ್ಯಾಂಕ್ ಅಧಿಕಾರಿಗಳು ಮನೆಗೆ ಬೀಗ ಹಾಕಿದ್ದು, ಇದೀಗ ಕುಟುಂಬಸ್ಥರು ತನ್ನ ಸಾಮಗ್ರಿಗಳ ಜೊತೆಗೆ ಮನೆಯಿಂದ ಆಚೆಯೇ ಬೀದಿಯಲ್ಲಿದ್ದು ನೆರೆ ಮನೆಯ ಆಶ್ರಯ ಪಡೆದು ಸಹಾಯಕ್ಕಾಗಿ ಕಣ್ಣೀರು ಸುರಿಸುತ್ತಿದ್ದಾರೆ. ಇಂಥದ್ದೊಂದು ಅಮಾನವೀಯ ಘಟನೆ ಹಾಸನ ಜಿಲ್ಲೆ ಆಲೂರು ತಾಲೂಕಿನ ಕುಂದೂರು ಹೋಬಳಿಯ ವಳಗರವಳ್ಳಿ ಗ್ರಾಮದಲ್ಲಿ ನಡೆದಿದೆ. ವಳಗರಹಳ್ಳಿ ಗ್ರಾಮದ ಪ್ರಸನ್ನ ಹಾಗೂ ಉಮಾವತಿ ದಂಪತಿ ಕುಟುಂಬವನ್ನು ಈಕ್ವಿಟಾಸ್ ಬ್ಯಾಂಕ್ ಅಧಿಕಾರಿಗಳು ಮನೆಯಿಂದ ಹೊರಹಾಕಿ, ಬೀದಿಪಾಲು ಮಾಡಿದ್ದಾರೆ. ತಮ್ಮ ಮನೆಯ ಬಾಗಿಲಲ್ಲೇ ತಮ್ಮ ಸಾಮಗ್ರಿಗಳ ಜೊತೆ ಕುಳಿತ ಉಮಾವತಿ ಸಹಾಯಕ್ಕಾಗಿ ರೈತ ಮುಖಂಡ ಕಣಗಾಲ್ ಮೂರ್ತಿ ಮೋರೆ ಹೋಗಿದ್ದು ಇದನ್ನು ಗಮನಿಸಿದ ರೈತ ಮುಖಂಡರು ಕುಟುಂಬಸ್ಥರ ಅಸಹಾಯಕ ಸ್ಥಿತಿ ಬಗ್ಗೆ ತಿಳಿದು ತಮ್ಮ ರೈತ ಸಂಘಟನೆಯವರೆಲ್ಲರು ಸೇರಿ ಮನೆಯ ಬೀಗ ಹೊಡೆದು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.



ಮನೆಗೆ ಬೀಗ ಹಾಕಿದ ಈಕ್ವಿಟಾಸ್ ಸ್ಮಾಲ್ ಫೈನಾನ್ಸ್ ಕಂಪನಿ ವಿರುದ್ಧ ರೈತ ಸಂಘಟನೆ ಆಕ್ರೋಶ ಹೊರಹಾಕಿತು.

ಘಟನೆಯ ವಿವರ: ಈ ಬಗ್ಗೆ ಮನೆಯ ವಾರಸುದಾರಿ ಉಮಾವತಿ ಮಾತನಾಡಿ ನಾವು 2019ರಲ್ಲಿ ಈಕ್ವಿಟಾಸ್ ಮೈಕ್ರೋ ಫೈನಾನ್ಸ್ ಬ್ಯಾಂಕ್‌ನಲ್ಲಿ ಮನೆಯ ಮೇಲೆ ಎರಡು ಲಕ್ಷ ರು. ಹಣ ಲೋನ್ ಮಾಡಿಸಿದ್ದೆವು. ಅದರಲ್ಲಿ ನಮಗೆ ಒಂದು ಲಕ್ಷದ ಎಂಬತ್ತು ಸಾವಿರ ಹಣ ನಮಗೆ ಸಿಕ್ಕಿದ್ದು ಈ ಹಣವನ್ನು ನಾವು ಕಷ್ಟಪಟ್ಟು ಕಟ್ಟಿದ್ದೇವೆ. ಆದರೂ ಕೂಡ ಬ್ಯಾಂಕ್ ಸಿಬ್ಬಂದಿ ಮೂರು ಲಕ್ಷದ ಮೂವತ್ತು ಸಾವಿರ ರು. ಹಣವನ್ನು ಕಟ್ಟಿಕೊಡಿ ಯೆಂದು ಹಿಂಸೆ ಕೊಡುತ್ತಿದ್ದೂ ನಾವು ಅಷ್ಟೊಂದು ಹಣವನ್ನು ಕಟ್ಟಲು ಆಗುವುದಿಲ್ಲವೆಂದಾಗ ನಾವು ಇಲ್ಲದ ಸಮಯದಲ್ಲಿ ನಮ್ಮ ಮಗಳನ್ನು ಮನೆಯಿಂದ ಆಚೆ ಹಾಕಿ ಮನೆಗೆ ನೋಟಿಸ್ ಅಂಟಿಸಿ ಹೋಗಿದ್ದಾರೆ. ನಮ್ಮ ಮನೆಯವರು ಕಾಯಿಲೆ ಪೀಡಿತರಾಗಿದ್ದು ಅವರನ್ನು ಮಂಗಳೂರಿಗೆ ಆಸ್ಪತ್ರೆಗೆ ಕರೆದುಕೊಂಡು ಹೋದ ಸಂದರ್ಭದಲ್ಲಿ ಮನೆಗೆ ನೋಟಿಸ್ ಅಂಟಿಸಿ ಹೋಗಿದ್ದು ನಾವು ಅದನ್ನು ನೋಡಿಲ್ಲ ಆಸ್ಪತ್ರೆಯಿಂದ ಬರುವಷ್ಟರಲ್ಲಿ ನಮ್ಮ ಮಗಳು ಒಬ್ಬಳೇ ಇದ್ದಾಗ ಅವಳನ್ನು ಮನೆಯಿಂದ ಹೊರಗೆ ತಳ್ಳಿ ಬೀಗ ಹಾಕಿಕೊಂಡು ಹೋಗಿದ್ದಾರೆ. ನಾವು ಹಣವನ್ನು ನಿಗದಿಪಡಿಸಿದ ದಿನಕ್ಕೆ ಸರಿಯಾಗಿ ಕಟ್ಟಿ ಕೊಟ್ಟರು ಕೂಡ ಬ್ಯಾಂಕ್ ಸಿಬ್ಬಂದಿ ಬಾಯಿಗೆ ಬಂದಂತೆ ಬೈದು ಏಕವಚನದಲ್ಲಿ ಮಾತಾನಾಡುತ್ತಿದ್ದರು. ಅಲ್ಲದೆ ಕೆಲಸ ಮಾಡಲು ಬಿಡದೆ ಹಿಂಸೆ ಕೊಡುತ್ತಿದ್ದರು ಎಂದು ಗಂಭೀರ ಆರೋಪ ಮಾಡಿದ್ದಾರೆ. ನಾವು ಕಟ್ಟಿದ ಹಣವನ್ನು ಬ್ಯಾಂಕ್ ಸಿಬ್ಬಂದಿ ಕಟ್ಟದೇ ನಮ್ಮ ಮೇಲೆ ಆರೋಪ ಹೊರೆಸುತ್ತಿದ್ದಾರೆ. ಇನ್ನೂ ಹೆಚ್ಚು ಹಣ ಕಟ್ಟುವಂತೆ ಹಿಂಸೆ ಕೂಡುತ್ತಿದ್ದಾರೆ. ನಾವು ಬಡವರು ನಮಗೆ ಅಷ್ಟೊಂದು ಹಣವನ್ನು ಕಟ್ಟಲು ಸಾಧ್ಯವಿಲ್ಲವೆಂದು ಕಣ್ಣೀರಿಡುತ್ತಾ ತಮ್ಮ ಅಳಲನ್ನು ತೋಡಿಕೊಂಡರು.

ಹಾಸನ ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಣಗಾಲ್ ಮೂರ್ತಿ ಮಾತಾನಾಡಿ ಮನೆ ಅಡಮಾನ ಮಾಡಿ ಮೂರು ಲಕ್ಷ ಸಾಲ ಮಾಡಿದ ಕಾರಣ ಬ್ಯಾಂಕ್ ಅಧಿಕಾರಿಗಳು ಮನೆ ಜಪ್ತಿ ಮಾಡಿದ್ದು ಮನೆ ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಒಬ್ಬ ಸಾಮಾನ್ಯ ಬಡ ಕುಟುಂಬಗಳ ಮೇಲೆ ಖಾಸಗಿ ಬ್ಯಾಂಕಿನವರ ದಬ್ಬಾಳಿಕೆ ತೋರಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು ಎರಡು ಲಕ್ಷಕ್ಕೆ ಮೂರು ಲಕ್ಷ ಹಣ ಕಟ್ಟಿಯೆಂದರೆ ಹೇಗೆ ಕಟ್ಟುತ್ತಾರೆ. ಹಾಗಾದ್ರೆ ಬ್ಯಾಂಕಿನಲ್ಲಿ ಬಡ್ಡಿ ಹಣವೆಷ್ಟು ಎಂದು ಪ್ರಶ್ನಿಸಿದರು.

ಹೆಚ್ಚು ಬಡ್ಡಿ ಹಣದ ಆಸೆಗೆ ಮೈಕ್ರೋ ಫೈನಾನ್ಸ್ ಬ್ಯಾಂಕ್ ಸಿಬ್ಬಂದಿ ಮಹಿಳೆಗೆ ತೊಂದರೆ ಕೊಟ್ಟು ಮನೆಗೆ ಬೀಗ ಹಾಕಿ ಜಪ್ತಿ ಮಾಡಿಸಿದ್ದಾರೆ. ಮನೆಯಲ್ಲಿ ಒಂದು ಹೆಣ್ಣು ಮಗು ಏನು ಇಲ್ಲದೆ ಬರೀ ಕೈನಲ್ಲಿ ಕಳುಹಿಸುವುದೆಂದರೆ ಏನು ಅರ್ಥ. ಬ್ಯಾಂಕ್ ಸಿಬ್ಬಂದಿಗೆ ಮಾನ ಮರ್ಯಾದೆ ಇಲ್ಲವೇ ಒಂದಿಷ್ಟು ಮಾನವೀಯತೆಯು ಇಲ್ಲದೆ ಹೆಣ್ಣು ಮಕ್ಕಳನ್ನು ಹೊರಗೆ ತಳ್ಳಿ ಬೀಗ ಹಾಕಿದ್ದಾರೆ. ಆ ಕುಟುಂಬ ಮನೆಯಿಲ್ಲದೆ ಎಲ್ಲಿ ಹೊಗಬೇಕು ಏನು ಮಾಡಬೇಕು ತಮ್ಮ ಜಾನುವಾರುಗಳ ಕೊಠಡಿ ಸೇರಿ ಇಡೀ ಮನೆಗೆ ಬೀಗ ಹಾಕಿದ್ದಾರೆ. ಮನೆ ಇಲ್ಲದೆ ಪಕ್ಕದ ಮನೆಯಲ್ಲಿ ಹೋಗಿದ್ದಾರೆ. ನಾಚಿಕೆಯಾಗಬೇಕು ಬ್ಯಾಂಕ್ ಸಿಬ್ಬಂದಿಗೆ ಮೈಕ್ರೋ ಫೈನಾನ್ಸ್ ಹಾವಳಿ ಹೆಚ್ಚಾಗಿದ್ದು ಕೊಡಲೇ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಗಮನಹರಿಸಿ ಆ ಕುಟುಂಬಸ್ಥರಿಗೆ ನ್ಯಾಯ ಕೊಡಿಸಿ ಈ ಭಾಗದಲ್ಲಿ ಕೂಡ ಆನೆಗಳ ಹಾವಳಿ ಇದೆ, ರಾತ್ರಿ ಹೇಗೆ ಮಗಲಬೇಕು? ಆ ಕುಟುಂಬದ ಹೆಣ್ಣು ಮಗುವಿನ ಸೂಕ್ತ ರಕ್ಷಣೆ ಏನು ಎಷ್ಟು ದಿನ ಮನೆಯಿಲ್ಲದೆ ಬೇರೆಯವರ ಮನೆಯಲ್ಲಿಯೇ ಇರುತ್ತಾರೆ. ನಾವಿನ್ನು ಬದುಕಿದ್ದೇವೆ ನಮ್ಮ ರೈತ ಸಂಘ ಅವರಿಗೆ ನ್ಯಾಯ ಸಿಗುವವರೆಗೂ ಜೊತೆಯಲ್ಲಿಯೇ ನಿಲ್ಲುತ್ತೇವೆ. ನಾವು ಯಾರಿಗೂ ಭಯ ಪಡುವ ಅವಶ್ಯಕತೆ ಇಲ್ಲವೆಂದು ಮನೆಯ ಬೀಗ ಒಡೆದು ಕುಟುಂಬಸ್ಥರಿಗೆ ಇರಲು ವ್ಯವಸ್ಥೆ ಮಾಡಿಕೊಟ್ಟಿದ್ದೇವೆ. ಕೊಡಲೇ ಈಕ್ವಿಟಾಸ್ ಸಿಬ್ಬಂದಿಗಳ ಮೇಲೆ ಕ್ರಮ ಕೈಗೊಳ್ಳದಿದ್ದರೆ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದ್ದಾರೆ. ಈ ಸಂದರ್ಭದಲ್ಲಿ ಮನೆಯ ದಂಪತಿ ಹಾಗೂ ರೈತ ಸಂಘಟನೆಯ ವಿವಿಧ ಮುಖಂಡರು ಕಾರ್ಯಕರ್ತರು ಹಾಜರಿದ್ದರು.

ದಲಿತರಿಂದ ಪ್ರತಿಭಟನೆ: ಪೊಲೀಸರ ಸಮ್ಮುಖದಲ್ಲಿ ದೇವಾಲಯ ಪ್ರವೇಶ

ಶಾಂತಿ ಸೌಹಾರ್ದತೆ ಕಾಪಾಡುವಂತೆ ಮುಖಂಡರ ಮನವೊಲಿಕೆ

• **ಕನ್ನಡಪ್ರಭ ವಾರ್ತೆ** ಬೇಲೂರು

ತಾಲೂಕಿನ ಇ ಹೊಸಳ್ಳಿ ಗ್ರಾಮದ ದೊಡ್ಡಮ್ಮ (ದೇವಿರಮ್ಮ) ಹಾಗೂ ಚಿಕ್ಕಮ್ಮ ದೇವರ ಜಾತ್ರೆ ಹಾಗೂ ಕೆಂಡೋತ್ಸವ ನಡೆಸುವ ವಿಷಯದಲ್ಲಿ ಎರಡು ಕೋಮುಗಳ ನಡುವೆ ಭಿನ್ನಾಭಿಪ್ರಾಯಕ್ಕೆ ಕಾರಣವಾಗಿ ಗ್ರಾಮದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದ್ದು ಗಂಗಾಮತ ಜನಾಂಗದಿಂದ ಸಂಪ್ರದಾಯವನ್ನು ಕಡೆಗಣಿಸಿ ದೇವರ ಜಾತ್ರೆ ಹಾಗೂ ಕೆಂಡೋತ್ಸವ ನಡೆಸಲಾಗುತ್ತದೆ ಎಂದು ದಲಿತರಿಂದ ಪ್ರತಿಭಟನೆ ನಡೆಸಲಾಯಿತು.

ಪ್ರತಿವರ್ಷದಂತೆ ಮಾರ್ಚ್ ತಿಂಗಳ ಮೊದಲ ವಾರದಲ್ಲಿ ಗ್ರಾಮದೇವತೆಗಳ ಜಾತ್ರೋತ್ಸವ ನಡೆಯುತ್ತಿತ್ತು. ದಲಿತರು ಕೆಂಡೋತ್ಸವ ಆಚರಣೆ ಮಾಡಿದರೆ ಗಂಗಾಮತ ಜನಾಂಗದಿಂದ ಸಿಡಿ ಉತ್ಸವ ಆಚರಿಸುವುದು ವಾಡಿಕೆ ಯಾಗಿತ್ತು.. ಆದರೆ ಇತ್ತೀಚೆಗೆ ಜಾತ್ರೆ ನಡೆಸುವ ವಿಚಾರವಾಗಿ ಎರಡು ಕೋಮುಗಳ ನಡುವೆ ಭಿನ್ನಾಭಿಪ್ರಾಯ ಎದುರಾಗಿ ತಹಸೀಲ್ದಾರ್ ಹಾಗೂ ಪೊಲೀಸ್ ಇಲಾಖೆ ವರೆಗೂ ದೂರು ನೀಡಲಾಗಿತ್ತು ಎಂದು ತಿಳಿದು ಬಂದಿದೆ. ವಿಷಯ ತಿಳಿಯುತ್ತಿದ್ದಂತೆ ಭಾನುವಾರ ರಾತ್ರಿ ಡಿವೈಎಸ್ಪಿ ಗೋಪಿ ಹಾಗೂ ತಹಸೀಲ್ದಾರ್ ಶ್ರೀಧರ್ ಕಂಕನಾವಾಡಿ ರವರು ಗ್ರಾಮಕ್ಕೆ ಭೇಟಿ ನೀಡಿ ಎರಡು ಜನಾಂಗದ ಮುಖಂಡರೊಂದಿಗೆ ಮಾತುಕತೆ ನಡೆಸಿ ಗ್ರಾಮಸ್ಥರೆಲ್ಲರೂ ಭಿನ್ನಾಭಿಪ್ರಾಯ ಮರೆತು ಸೌಹಾರ್ದತೆಯಿಂದ ಜಾತ್ರೆ ಆಚರಿಸುವಂತೆ ತಿಳಿವಳಿಕೆ ನೀಡಿದರು.



ಇ ಹೊಸಳ್ಳಿ ಗ್ರಾಮದಲ್ಲಿ ಜಾತ್ರೆ, ಕೆಂಡೋತ್ಸವ ವೇಳೆ ಗಂಗಾಮತ ಜನಾಂಗದಿಂದ ಸಂಪ್ರದಾಯವನ್ನು ಕಡೆಗಣಿಸಲಾಗಿದೆ ಎಂದು ದಲಿತರಿಂದ ಪ್ರತಿಭಟನೆ ನಡೆಸಲಾಯಿತು.

ಪೊಲೀಸ್ ಭದ್ರತೆಯಲ್ಲಿ ಮುಂಜಾನೆ ಕೆಂಡೋತ್ಸವ. ಗ್ರಾಮದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆದಂತೆ ಮುಂಜಾಗ್ರತ ಕ್ರಮವಾಗಿ ಬೇಲೂರು ವೃತ್ತ ನಿರೀಕ್ಷಕ ರೇವಣ್ಣ ನೇತೃತ್ವದಲ್ಲಿ ನೂರಾರು ಪೊಲೀಸ್ ಸಿಬ್ಬಂದಿಯನ್ನು ನೇಮಿಸಲಾಗಿತ್ತು. ಸೋಮವಾರ ಮುಂಜಾನೆ ಕೆಂಡೋತ್ಸವ ನಡೆಯಿತು. ಕೆಲವು ಆಚರಣೆ ಹಾಗೂ ನಿರ್ಬಂಧವನ್ನು ಬದಿಗೊತ್ತಿ ದಲಿತರು ದೊಡ್ಡಮ್ಮ ದೇಗುಲಕ್ಕೆ ಪ್ರವೇಶ ಮಾಡಿದರು.

ಸಂಜೆ ಸಮಯದಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಶಿಕ್ಷಕರನ್ನು ನೇಮಿಸಿ

ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಶಾಸಕ ರೇವಣ್ಣ ಒತ್ತಾಯ

• **ಕನ್ನಡಪ್ರಭ ವಾರ್ತೆ** ಹೊಳೆನರಸೀಪುರ

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಬಡವರ ಮಕ್ಕಳು ಕಲಿಯುವ ಸರ್ಕಾರಿ ಶಾಲೆಗಳಿಗೆ ಅಗತ್ಯ ಸೌಲಭ್ಯ ಒದಗಿಸುವ ಜತೆಗೆ ಶಿಕ್ಷಕರ ನೇಮಕ ಅಗತ್ಯವಾಗಿದೆ. ಸರ್ಕಾರಿ ವಸತಿ ನಿಲಯಗಳಲ್ಲಿ ಉಳಿದು ಕಲಿಯುವ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಸಂಜೆ ಸಮಯದಲ್ಲಿ ತರಬೇತಿ ನೀಡಲು ಶಿಕ್ಷಕರನ್ನು ನೇಮಿಸಬೇಕೆಂದು ಶಾಸಕ ಎಚ್.ಡಿ. ರೇವಣ್ಣ ಒತ್ತಾಯಿಸಿದರು.

ಪಟ್ಟಣದ ಡಿ. ದೇವರಾಜ ಅರಸು ಭವನದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಿದ್ದ 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ವಸತಿ ನಿಲಯಗಳಲ್ಲಿ ಉಳಿದು ಹೆಚ್ಚು ಅಂಕಗಳಿಸಿದ 12 ವಿದ್ಯಾರ್ಥಿಗಳ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು. ಸರ್ಕಾರ ರಸ್ತೆ ಗುಂಡಿಗಳನ್ನು ಮುಚ್ಚದಿದ್ದರೂ ಪರವಾಗಿಲ್ಲ, ಆದರೆ ಗ್ರಾಮೀಣ ಪ್ರದೇಶಗಳಿಂದ ಬಂದು ಸರ್ಕಾರಿ ಶಾಲೆಗಳು ಹಾಗೂ ವಸತಿ ನಿಲಯಗಳಲ್ಲಿ ಉಳಿದು ವ್ಯಾಸಂಗ ನಡೆಸುತ್ತಿರುವ ವಿದ್ಯಾರ್ಥಿಗಳಿಗೆ ಉತ್ತಮ ವ್ಯಾಸಂಗ ದೊರತರೆ ಅದೇ ದೊಡ್ಡ ಅಭಿವೃದ್ಧಿ. ಆದ್ದರಿಂದ ನಾನು ಸರ್ಕಾರಕ್ಕೆ ಹೇಳುವುದು ಇಷ್ಟೆ ಮೊದಲು ಮಕ್ಕಳಿಗೆ ವಿದ್ಯೆಯನ್ನು ಸರಿಯಾಗಿ ನೀಡುವ ಸಲುವಾಗಿ ಮೂಲ ಸೌಕರ್ಯಗಳನ್ನು ನೀಡಲಿ, ಪ್ರಸ್ತುತ ರಾಜ್ಯದಲ್ಲಿರುವ ಸರ್ಕಾರಿ ಶಾಲೆಗಳ ಶಿಕ್ಷಕರ ಬದ್ಧತೆಯ ಕರ್ತವ್ಯದಿಂದಾಗಿ ಖಾಸಗಿ ಶಾಲೆಗಳಿಗಿಂತ ವಾರ್ಷಿಕ ಪರೀಕ್ಷೆಗಳಲ್ಲಿ ಉತ್ತಮ ಫಲಿತಾಂಶ ಬರುತ್ತಿದೆ. ಶಿಕ್ಷಕರ ನೇಮಕ ಹಾಗೂ ಅಗತ್ಯ ಸೌಲಭ್ಯ ನೀಡಿದರೆ ಖಾಸಗಿ ಶಾಲೆಗಳು ತಂತಾನೇ ಬಾಗಿಲು ಹಾಕಿಕೊಳ್ಳುತ್ತದೆ ಎಂದು ಅಭಿಪ್ರಾಯಪಟ್ಟರು.



ತಾವು ಸಚಿವರಾಗಿದ್ದ ಅವಧಿಯಲ್ಲಿ ಜಿಲ್ಲೆಯಲ್ಲಿ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುವ ಸಲುವಾಗಿ ಸರ್ಕಾರಿ ಶಿಕ್ಷಣ ಸಂಸ್ಥೆಗಳನ್ನು ತಂದ ಫಲವಾಗಿ ಇಂದು ಪ್ರತಿಯೊಬ್ಬರಿಗೂ ಉತ್ತಮ ಶಿಕ್ಷಣ ದೊರಕುತ್ತಿದೆ ಜತೆಗೆ ತಾಲೂಕಿನಲ್ಲಿ ಏಳು ಮೊರಾರ್ಜಿ ಶಾಲೆ, ಏಳು ಪಬ್ಲಿಕ್ ಶಾಲೆ, ಕಸ್ತೂರಿ ಬಾ ಶಾಲೆ, ಕಿತ್ತೂರು ರಾಣಿ ಚನ್ನಮ್ಮ ಶಾಲೆಗಳಲ್ಲಿನ ವಿದ್ಯಾರ್ಥಿಗಳು ವಾರ್ಷಿಕ ಪಲಿತಾಂಶದಲ್ಲಿ ಉನ್ನತ ಸ್ಥಾನಕ್ಕೆ ಬರಲು ಸಾಧ್ಯವಾಯಿತು ಎಂದರು. ಖಾಸಗಿ ಶಾಲೆಗಳು ತನ್ನಲ್ಲಿ ಸೇರ್ಪಡೆ ಮಾಡಿಕೊಳ್ಳುವ ವಿದ್ಯಾರ್ಥಿಗಳಿಂದ ಸಾಕಷ್ಟು ಹಣ ವಸೂಲಿ ಮಾಡುತ್ತಿದೆಯಾದರೂ, ಶಿಕ್ಷಣ ನೀಡುವ ವಿಷಯದಲ್ಲಿ ಸರ್ಕಾರಿ ಶಿಕ್ಷಕರಿಗಿಂತ ಹಿಂದುಳಿಯುತ್ತಿರುವುದು ಇತ್ತೀಚಿನ ಫಲಿತಾಂಶಗಳಿಂದ ಗೊತ್ತಾಗುತ್ತಿದೆ ಎಂದರು.

2025-26 ನೇ ಸಾಲಿನಲ್ಲಿ ಹಾಸ್ಟೆಲ್‌ಗಳಲ್ಲಿ ಉಳಿದು ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ 12 ವಿದ್ಯಾರ್ಥಿಗಳಿಗೆ ಶಾಸಕ ಎಚ್. ಡಿ. ರೇವಣ್ಣ ಅವರು ಪ್ರಶಸ್ತಿ ಪತ್ರ ನೀಡಿ, ಶಾಲು ಹೊದಿಸಿ ಗೌರವಿಸಿ, ಅಭಿನಂದಿಸಿ ಶ್ಲಾಘಿಸಿದರು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಹರೀಶ್ ಉಪಸ್ಥಿತಿಯಲ್ಲಿ ಕಾರ್ಯಕ್ರಮ ನಡೆಯಿತು.

ನಾಗಲಿಂಗೇಶ್ವರ, ಮಾರಿದುರ್ಗಮ್ಮ ಪುನರ್ ಪ್ರತಿಷ್ಠಾಪನಾ ಕಾರ್ಯಕ್ರಮ

• **ಕನ್ನಡಪ್ರಭ ವಾರ್ತೆ** ಸಕಲೇಶಪುರ

ತಾಲೂಕಿನ ಬಾಳ್ಳುಪೇಟೆ ಸಮೀಪದ ಮೆಣಸಮಕ್ಕಿ ಗ್ರಾಮದಲ್ಲಿ ಶ್ರೀ ನಾಗಲಿಂಗೇಶ್ವರ ಸ್ವಾಮಿ ಹಾಗೂ ಮಾರಿದುರ್ಗಮ್ಮನವರ ದೇವಾಲಯದ ಪುನರ್‌ಪ್ರತಿಷ್ಠಾಪನಾ ಕಾರ್ಯಕ್ರಮ ಭಕ್ತಿಭಾವದಿಂದ ನೆರವೇರಿತು.

ಕಾರ್ಯಕ್ರಮದಲ್ಲಿ ಜವೇನಹಳ್ಳಿ ವಿರಕ್ತ ಮಠದ ಶ್ರೀ ಸಂಗಮೇಶ್ವರ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿ, ಭಾರತೀಯರು ಜಗತ್ತಿಗೆ ಸಂಸ್ಕೃತಿ, ನಾಗರಿಕತೆ ಹಾಗೂ ಬದುಕುವ ಕಲೆಯನ್ನು ಪರಿಚಯಿಸಿದವರು. ದೇಶ ಉಳಿಯಬೇಕಾದರೆ ಹಿಂದೂ ಧರ್ಮ ಉಳಿಯಬೇಕು. ಈ ನಿಟ್ಟಿನಲ್ಲಿ ದೇಶದಾದ್ಯಂತ ಧಾರ್ಮಿಕ ಕಾರ್ಯಕ್ರಮಗಳು ನಿರಂತರ ವಾಗಿ ನಡೆಯಬೇಕು ಎಂದು ಹೇಳಿದರು.

ಶಾಸಕ ಸಿಮೆಂಟ್ ಮಂಜು ಮಾತನಾಡಿ, ಹಿಂದೂ ಧರ್ಮವು ಸಂಸ್ಕೃತಿ ಮತ್ತು ಸಂಪ್ರದಾಯಗಳ ಪ್ರತೀಕವಾಗಿದ್ದು, ಪ್ರತಿಯೊಬ್ಬರೂ ಸಂಸ್ಕೃತಿಯೊಂದಿಗೆ ಜೀವನ ನಡೆಸಿದಾಗ ಮಾತ್ರ ಬದುಕು ಸಾರ್ಥಕವಾಗುತ್ತದೆ. ಭಾರತೀಯ ಸಂಸ್ಕೃತಿಯನ್ನು ಇತರ ರಾಷ್ಟ್ರಗಳೂ ಅಳವಡಿಸಿಕೊಳ್ಳುತ್ತಿರು ವುದು ಹೆಮ್ಮೆಯ ಸಂಗತಿ. ಪಾಲಕರು ಮಕ್ಕಳಿಗೆ ಬಾಲ್ಯದಿಂದಲೇ ಸಂಸ್ಕೃತಿ ಮತ್ತು ಧಾರ್ಮಿಕ ಮೌಲ್ಯ ಗಳನ್ನು ಬೋಧಿಸಬೇಕು ಎಂದು ಸಲಹೆ ನೀಡಿದರು. ಹಿಂದೂ ಧರ್ಮದ ಆಚರಣೆಗಳಲ್ಲಿ ವೈಜ್ಞಾನಿಕತೆ ಅಡಗಿದ್ದು, ದ್ವೇಷ ಮತ್ತು ಅಸೂಯೆ ತೊರೆದು ಎಲ್ಲರನ್ನು ಸಾಮರಸ್ಯದಿಂದ ಕಾಣುವ ಮನೋಭಾವ ಬೆಳೆಸಿಕೊಳ್ಳಬೇಕು. ಹಿಂದೂ ಧರ್ಮದೊಂದಿಗೆ ಭಾರತ ಭೂಮಿಯಲ್ಲಿ ಜನಿಸಿರುವುದು ನಮ್ಮ ಭಾಗ್ಯ ಎಂದು ಹೇಳಿದರು.



ಯಡೇಹಳ್ಳಿ ಆರ್. ಮಂಜುನಾಥ್ ಮಾತನಾಡಿ, ಪಾಶ್ಚಾತ್ಯ ಸಂಸ್ಕೃತಿಯ ಅತಿಯಾದ ಅನು ಕರಣೆಯಿಂದ ನಮ್ಮ ಪರಂಪರೆ ಹದಗೆಡುತ್ತಿದೆ. ತಾಯಂದಿರು ಮಕ್ಕಳಿಗೆ ಚಿಕ್ಕಂದಿನಿಂದಲೇ ಧಾರ್ಮಿಕ ಮೌಲ್ಯಗಳು ಹಾಗೂ ಸದ್ವಿಚಾರಗಳನ್ನು ಕಲಿಸಿಕೊಡಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಯರಾಜ್, ನಾಗೇಶ್, ಬಿ.ಎಂ. ಶಿವಕುಮಾರ್, ವಕೀಲ ಛಲವಾದಿ ಡಿ. ಕರಿಯಣ್ಣ, ಹಿಂದೂ ಹಿತರಕ್ಷಣಾ ಸಂಘಟನೆಯ ಮುಖಂಡ ರಘು, ರಾಜಶೇಖರ್, ಚಂದ್ರಣ್ಣ, ಪುಟ್ಟಯ್ಯ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಫುಡ್‌ಕೋರ್ಟ್ ನಿರ್ಮಾಣಕ್ಕೆ ಗುದ್ದಲಿ ಪೂಜೆ

ವ್ಯಾಪಾರಸ್ಥರಿಗೆ ಸಿಗಲಿದೆ ಶಾಶ್ವತ ಸೌಲಭ್ಯ: ಶಾಸಕ ಸ್ವರೂಪ್

• **ಕನ್ನಡಪ್ರಭ ವಾರ್ತೆ** ಹಾಸನ/ಚನ್ನಪಟ್ಟಣ

ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಎದುರು ನಿರ್ಮಾಣವಾಗಲಿರುವ ನೂತನ ಫುಡ್‌ಕೋರ್ಟ್ ಕಾಮಗಾರಿಗೆ ಶಾಸಕ ಎಚ್.ಪಿ. ಸ್ವರೂಪ್ ಅವರು ಸೋಮವಾರ ಗುದ್ದಲಿಪೂಜೆ ನೆರವೇರಿಸಿದರು.

ನಂತರ ಮಾಧ್ಯಮದೊಂದಿಗೆ ಶಾಸಕರು ಮಾತನಾಡಿ, ರಸ್ತೆ ಬದಿ ವ್ಯಾಪಾರಸ್ಥರ ಹಲವು ವರ್ಷಗಳ ಬೇಡಿಕೆಯನ್ನು ಮನಗಂಡು ಈ ಫುಡ್ ಕೋರ್ಟ್ ನಿರ್ಮಾಣಕ್ಕೆ ಮುಂದಾಗಲಾಗಿದೆ. ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಅನುದಾನದಲ್ಲಿ ಸುಮಾರು ? 35 ಲಕ್ಷ, ಸಿಎಂಐಡಿಪಿ ಅನುದಾನದಲ್ಲಿ ಸುಮಾರು ₹29 ಲಕ್ಷ ಹಾಗೂ ಶಾಸಕರ ಸ್ಥಳೀಯಾಭಿವೃದ್ಧಿ ನಿಧಿಯಿಂದ ಸುಮಾರು 5 ಲಕ್ಷ ಸೇರಿದಂತೆ ಒಟ್ಟು ಸುಮಾರು ₹ 69 ಲಕ್ಷ ವೆಚ್ಚದಲ್ಲಿ ಕಾಮಗಾರಿ ಕೈಗೊಳ್ಳಲಾಗುತ್ತಿದೆ ಎಂದರು. ಈ ಫುಡ್‌ಕೋರ್ಟ್ ನಿರ್ಮಾಣದಿಂದ ನಗರದ ಜನತೆಗೆ ಸ್ವಚ್ಛ, ಗುಣಮಟ್ಟದ ಹಾಗೂ ವಿವಿಧ ರೀತಿಯ ಆಹಾರ ಪದಾ ರ್ಥಗಳು ಒಂದೇ ಸ್ಥಳದಲ್ಲಿ ಲಭ್ಯವಾಗಲಿವೆ. ಈಗಾಗಲೇ ರಸ್ತೆ ಬದಿಯಲ್ಲಿ ಸಣ್ಣಪುಟ್ಟ ಅಂಗಡಿಗಳನ್ನು ಇಟ್ಟು ವ್ಯಾಪಾರ ನಡೆಸುತ್ತಿರುವವರಿಗೆ ಸಮರ್ಪಕ ಮೂಲ ಸೌಕರ್ಯಗಳ ಕೊರತೆ ಇರುವುದರಿಂದ ಅವರು ಅನೇಕ ತೊಂದರೆಗಳನ್ನು ಅನುಭವಿಸುತ್ತಿದ್ದರು. ಹೊಸ ಫುಡ್‌ಕೋರ್ಟ್ ನಿರ್ಮಾಣವಾದ ನಂತರ ಅವರಿಗೆ ಶಾಶ್ವತ ಹಾಗೂ ಸುಸಜ್ಜಿತ ಅಂಗಡಿಗಳ ಸೌಲಭ್ಯ ದೊರೆಯಲಿದೆ ಎಂದು ಹೇಳಿದರು.



ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಗುಣಮಟ್ಟದೊಂದಿಗೆ ಪೂರ್ಣಗೊಳಿಸುವಂತೆ ಗುತ್ತಿಗೆದಾರರು ಹಾಗೂ ಸಂಬಂಧಿತ ಅಧಿಕಾರಿಗಳಿಗೆ ಸೂಚಿಸಿದರು. ವ್ಯಾಪಾರಸ್ಥರಿಗೆ ಯಾವುದೇ ತೊಂದರೆ ಆಗದಂತೆ ವ್ಯವಸ್ಥೆ ಕಲ್ಪಿಸಬೇಕು ಹಾಗೂ ಸಾರ್ವಜನಿಕರಿಗೆ ಉತ್ತಮ ಸೇವೆ ದೊರೆಯುವಂತೆ ಯೋಜನೆ ರೂಪಿಸಬೇಕು ಎಂದು ಅಭಿಪ್ರಾಯ ಪಟ್ಟರು. ಇದೇ ವೇಳೆ ಪಕ್ಷದ ಸ್ಥಳೀಯ ಮುಖಂಡರು, ಕಾರ್ಯಕರ್ತರು, ಸಾರ್ವಜನಿಕರು ಇದ್ದರು.

250ಕ್ಕೂ ಹೆಚ್ಚು ಬಾಳೆ ಗೊನೆ ಕಳವು, ಉಳಿದ ಬೆಳೆಯೂ ನಾಶ: ರೈತ ಕಂಗಾಲು



ಬಾಳೆ ಗೊನೆ ಕಳವು, ಮಾಡಿದ್ದಾರೆಂದು ರೈತ ಚಂದ್ರ ನಾಯಕ್ ಅಳಲು ತೋಡಿಕೊಂಡರು.

• **ಕನ್ನಡಪ್ರಭ ವಾರ್ತೆ** ಅರಸೀಕೆರೆ
